# ಕರ್ನಾಟಕ ಸರ್ಕಾರ

## ಶಾಲಾ ಶಿಕ್ಷಣ ಇಲಾಖೆ ( ಪದವಿಪೂರ್ವ )

## ಪರಿಷ್ಕೃತ ಪ್ರಶ್ನಾಕೋಠಿ – 2024–25

ವಿಷಯ:– ಐಚ್ಛಿಕ ಕನ್ನಡ (16)

ತರಗತಿ:– ಪ್ರಥಮ ಪಿಯುಸಿ

# ಪರಿವಿಡಿ

ಭಾಗ– 1: ವಚನಗಳು

1) ಆಚಾರವೆ ಕುಲ, ಅನಾಚಾರವೆ ಹೊಲೆ– ಮಾದಾರ ಚೆನ್ನಯ್ಯ
2) ನಾದ ಪ್ರಿಯ ಶಿವನಲ್ಲ– ಬಸವಣ್ಣ
3) ತನುಕರಗದವರಲ್ಲಿ– ಅಕ್ಕಮಹಾದೇವಿ
4) ಕಠಿಣವಾದುದೆಲ್ಲ ಕಷ್ಟಕರವಲ್ಲ.– ಸಿದ್ದಯ್ಯ ಪುರಾಣಿಕ

ಭಾಗ–2 : ಕೀರ್ತನೆಗಳು

1) ಏನು ಓದಲೇನು ಫಲ– ಪುರಂದರದಾಸ
2) ಎರಡು ದಿನದ ಸಂಸಾರ– ಕನಕದಾಸ
3) ಯಾಕೆ ಮರುಳಾದೆ ಹೀಂಗೆ ಎಲೆ ಮನವೆ– ಹೆಳವನಕಟ್ಟೆ ಗಿರಿಯಮ್ಮ

ಭಾಗ –3: ಜನಪದ ಹಾಗೂ ತತ್ವಪದ

1) ಚಿಕ್ಯಾಗ ಚೆಲುವ ಚಂದ್ರಾಮ– ತ್ರಿಪದಿಗಳು
2) ಬಣ್ಣದ ಗುಬ್ಬ್ಯಾರು ಮಳಿರಾಜ– ಜನಪದ ಗೀತೆ
3) ಶ್ರೀ ಗುರು ವಚನೋಪದೇಶ– ನಿಜಗುಣ ಶಿವಯೋಗಿ

ಭಾಗ–4 : ಹೊಸಗನ್ನಡ ಕಾವ್ಯ

1) ಮಾವಿನಗೊಲ್ಲೆ – ಮಧುರ ಚೆನ್ನ
2) ಶ್ರಾವಣ – ಅಂಬಿಕಾತನಯ ದತ್ತ
3) ರೈತನ ದೃಷ್ಟಿ – ಕುವೆಂಪು
4) ಎಲ್ಲರೊಳಗೊಂದಾಗು– ಡಿವಿಜಿ
5) ರೈಲ್ವೇ ನಿಲ್ದಾಣದಲ್ಲಿ– ಕೆ. ಎಸ್. ನರಸಿಂಹಸ್ವಾಮಿ
6) ಗಜಲ್– ಶಾಂತರಸ
7) ಇಲ್ಲ ಭಾರತ ಬರಿಯ ಕನಸಿನಲ್ಲಿ– ಸಿದ್ದಲಿಂಗ ಪಟ್ಟಣಶೆಟ್ಟಿ
8) ನನ್ನ ಚಪ್ಪಲಿಗಳಿಗೆ– ಸತೀಶ ಕುಲಕರ್ಣಿ
9) ಅವಳ ಚರಿತ್ರೆ– ಕೆ. ಷರೀಫಾ
10) ಕಾಗದದ ದೋಣಿಯಲ್ಲಿ– ಸುಬ್ಬು ಹೊಲೆಯಾರ

ಭಾಗ–5 : ಗದ್ಯ

1) ನಾಲ್ವರ್ ಧೂರ್ತರ್ ಓರ್ವ ಬ್ರಾಹ್ಮಣನಂ ವಂಚಿಸಿದ ಕಥೆ– ದುರ್ಗಸಿಂಹ
2) ರೋಮ್ ನಗರದಲ್ಲಿ – ಶಿವರಾಮ ಕಾರಂತ
3) ಮೈ ಮೇಲೆ ದೇವರು, ದೆವ್ವ ಬರುವುದು! ಏನು?– ಡಾ. ಸಿ. ಆರ್. ಚಂದ್ರಶೇಖರ್
4) ದಾರಿ ಯಾವುದಯ್ಯಾ ಕಾಲೇಜಿಗೆ?– ಸ.ಜ. ನಾಗಲೋಟಿ ಮಠ
5) ಕುಬುಸ– ಕುಂ. ವೀರಭದ್ರಪ್ಪ
6) ನಂಜನಗೂಡು ತಿರುಮಲಾಂಬ– ವಿಜಯಾ ದಬ್ಬೆ
7) ದೋಸೆ ರಾಜಕೀಯ– ವೈದೇಹಿ

ಭಾಗ– 6 : ಕನ್ನಡ ಭಾಷೆ, ಸಾಹಿತ್ಯದ ಅರ್ಥ, ವಿವರಣೆ, ಸ್ವರೂಪ, ವ್ಯಾಪ್ತಿ, ಪ್ರಯೋಜನ

## ಭಾಗ– 1: ವಚನಗಳು

### ಆಚಾರವೆ ಕುಲ, ಅನಾಚಾರವೆ ಹೊಲೆ

***ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1)ಜೀವನ ಜ್ಞಾನದಿಂದ ಮುಕ್ತಿಯೋ?
2)ಆಚಾರವೆಕುಲ, ಅನಾಚಾರವೇ ಹೊಲೆ.
3)ಅದು ಬಿಡುಗಡೆಯಿಲ್ಲದ ಹೊಲೆ.
4)ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಜೀವನ ಸಂಚಾರವಿರುವವರೆಗೆ _____
ಅ)ಪೂಜೆ ಮಾಡಬೇಕು ಅ)ಜ್ಞಾನವರಿಯಬೇಕು ಇ)ಕೆಲಸ ಮಾಡಬೇಕು ಈ)ಧ್ಯಾನ ಮಾಡಬೇಕು
2.ವ್ಯಾಪಾರ ಮಾಡುವವನು _____
ಅ)ಪುರುಷ ಆ)ರೈತ ಇ)ವೈಶ್ಯ ಈ)ದಲ್ಲಾಳಿ
3.ಕೃಷಿಯ ಮಾಡುವವನು_____
ಅ)ಶೂದ್ರ ಆ)ವ್ಯಾಪಾರಿ ಇ)ಕಾರ್ಮಿಕ ಈ)ಒಕ್ಕಲಿಗ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಎಲ್ಲಿಯವರೆಗೆ ಕರ್ಮಪೂಜೆ ಬೇಕೆಂಬರು?
2.ಕುಲ–ಹೊಲೆ ಸೂತಕ ಯಾವಾಗ ಇರುವುದಿಲ್ಲ?
3.ಕುಲಜರಲ್ಲವರು ಯಾರು?
4.ಮಾನವ ಯಾವ ಉಭಯವ ತಿಳಿದಿರಬೇಕು?
5.ಬ್ರಾಹ್ಮಣ ಯಾರು?
6.ಕ್ಷತ್ರಿಯರ ಗುಣ ಯಾವುದು?
7.ಸಮಗಾರ ಎಂದರೆ ಯಾರು?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಮಾದಾರ ಚೆನ್ನಯ್ಯ ಪ್ರಶ್ನಿಸಿರುವ ಮುಕ್ತಿಯ ಮಾರ್ಗಗಳಾವುವು?
2.ಬಿಡುಗಡೆ ಇಲ್ಲದ ಹೊಲೆ ಯಾವುದು?
3.ಸಮಗಾರ ವೃತ್ತಿಯ ಉಪಕರಣಗಳಾವುವು?

***ವಿವರವಾಗಿ ಉತ್ತರಿಸಿ:**

1.ಕುಲ–ಗೋತ್ರ–ಜಾತಿಗಳ ಬಗ್ಗೆ ಮಾದಾರ ಚೆನ್ನಯ್ಯನ ನಿಲುವನ್ನು ಸಂಗ್ರಹಿಸಿ ಬರೆಯಿರಿ.
2.ನಿಜಾತ್ಮಾರಾಮ ರಾಮನನ್ನು ಅರಿಯುವ ಬಗೆ ಹೇಗೆ? ಮಾದಾರ ಚೆನ್ನಯ್ಯನ ವಚನದ ಹಿನ್ನಲೆಯಲ್ಲಿ ವಿವೇಚಿಸಿ.

***ಭಾಷಾಭ್ಯಾಸ**

**1.ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**
ಅರಿ, ಆರಾಮ, ಕರ್ಮ, ಅಡಿ, ಮರೆ, ತಿಳಿ

**2.ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
ಕಾಯ, ತಿಳಿ, ಅಡಿ, ಅಧಮ, ನುಡಿ, ಕೈ

**3.ಇವುಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ:**
ಬ್ರಹ್ಮ, ಆತ್ಮ, ವೀರ

**4.ಇವುಗಳನ್ನು ಬಿಡಿಸಿ ಬರೆಯಿರಿ:**
ನಡೆಯಧಮವಾದಲ್ಲಿ, ಬಿಡುಗಡೆಯಿಲ್ಲದ, ಹೊಲಬನರಿದು, ಬ್ರಹ್ಮವನರಿದಲ್ಲಿ,ತಿಳಿದರಿಯಬೇಕು, ಸರ್ವವನಾರೈದು.

# ನಾದ ಪ್ರಿಯ ಶಿವನಲ್ಲ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು.
2.ಧರೆಹತ್ತಿ ಉರಿದಡೆ ನಿಲಲುಬಾರದು.
3.ನಾರಿ ತನ್ನ ಮನೆಯಲ್ಲಿ ಕಳುವಡೆ
4.ಇನ್ನಾರಿಗೆ ದೂರುವೆ.
5.ನಾದ ಪ್ರಿಯನೂ ಅಲ್ಲ ವೇದಪ್ರಿಯನೂ ಅಲ್ಲ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಶೂಲವೇರುವ ಕಳ್ಳನು ಬಯಸುವುದು_____
ಅ) ಮೊಸರು–ಮಜ್ಜಿಗೆ ಆ) ಹಾಲು–ತುಪ್ಪ ಇ) ಹಣ್ಣು–ಹಂಪಲು ಈ) ಬೆಲ್ಲ–ಸಕ್ಕರೆ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಕಪ್ಪೆ ಯಾವುದಕ್ಕೆ ಆಸೆ ಮಾಡಿತು?
2.ಯಾವುದು ಹತ್ತಿ ಉರಿದರೆ ನಿಲ್ಲಬಹುದು?
3.ತಾಯಿಯ ಮೊಲೆವಾಲು ಏನಾಗಬಾರದು?
4.ನಾದವ ನುಡಿಸಿದ ರಾವಣನಿಗೆ ಏನಾಯಿತು?
5.ವೇದವನೋದಿದ ಬ್ರಹ್ಮನಿಗೆ ಏನಾಯಿತು?
6.ಭಕ್ತಿಪ್ರಿಯ ಯಾರು?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಕೂಡಲ ಸಂಗಮ ಯಾರನ್ನು ಬಯಸುವುದಿಲ್ಲ?
2.ಇನ್ನಾರಿಗೆ ದೂರಲಿ ಎಂದು ಬಸವಣ್ಣ ಯಾವ ಸಂದರ್ಭದಲ್ಲಿ ಮೊರೆಯಿಡುತ್ತಾರೆ?

***ವಿವರವಾಗಿ ಉತ್ತರಿಸಿ:**

1.ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ... ವಚನದ ಹಿನ್ನಲೆಯಲ್ಲಿ ಕೌಟುಂಬಿಕ, ಸಾಮಾಜಿಕ, ರಾಜಕೀಯ ಸ್ಥಿತಿ–ಗತಿಯನ್ನು ವಿವರಿಸಿ.
2.ಭಕ್ತಿ ಮಾರ್ಗವೆ ಮೋಕ್ಷಕ್ಕೆ ಶ್ರೇಷ್ಠ ಎಂಬುದನ್ನು ಬಸವಣ್ಣನವರ ವಚನಗಳ ಹಿನ್ನಲೆಯಲ್ಲಿ ವಿವರಿಸಿ.

***ಭಾಷಾಭ್ಯಾಸ**

**1. ಇವುಗಳನ್ನು ಬಿಡಿಸಿ ಬರೆಯಿರಿ:**
ಮೇಲೇಸು, ಕೆಡುವೊಡಲ, ನೀರುಂಬಡೆ, ಮೊಲೆವಾಲು, ಶಿವನೆಂಬರು, ವೇದವನೋದಿದ

**2.ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
ತಾಯಿ, ಹಾವು, ಒಡಲು, ಹುಸಿ, ನಂಜು, ನಾರಿ, ಶಿರ, ಧರೆ, ನೀರು,

**3. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**
ಹತ್ತಿ, ಹೊರೆ, ಏರಿ, ಅರೆ, ಹಾರುವ

**4. ಇವುಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ:**
ಬ್ರಹ್ಮ, ಆಯುಷ್ಯ, ನಚ್ಚು, ಶೂಲ, ಶಿರ, ರಾವಳ

*******

## ತನುಕರಗದವರಲ್ಲಿ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ನೀ ಕೊಂದಡೆಯೂ ಶರಣೆಂಬುದ ಮಾಣೆ.
2.ರೂಪಿದ್ದು ಫಲವೇನು. ಗುಣವಿಲ್ಲದನ್ನಕ್ಕ?
3.ಸಕ್ಕರೆಯಾಗಿ ನೊಂದೆನೆಂದು ಸಿಹಿಯಬಿಟ್ಟಿತ್ತೆ?
4.ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ.
5.ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಮರ ಫಲದಾಯಕವಾಗುವುದು_____
ಅ)ಹಣ್ಣು ನೀಡಿದಾಗ ಆ) ಹೂ ಬಿಟ್ಟಾಗ ಇ)ನೆರಳು ನೀಡಿದಾಗ ಈ)ಮಳೆ ಬರಿಸಿದಾಗ
2.ನೈವೇದ್ಯಕ್ಕಿಂತ ಮುಖ್ಯವಾದುದು_____
ಅ)ನೀರು ಆ)ಗಾಳಿ ಇ)ಉಸಿರು ಈ) ಅನ್ನ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಚಂದನವ ತೇದಡೆ ಏನಾಗುತ್ತದೆ?
2.ಸುವರ್ಣವ ಕಡಿದೊರೆದಡೆ ಏನಾಗುತ್ತದೆ?
3.ಧನ ಫಲದಾಯಕವಾಗುವುದು ಯಾವಾಗ?
4.ಹಸು ಫಲದಾಯಕವಾಗುವುದು ಯಾವಾಗ?
5.ಚೆನ್ನಮಲ್ಲಿಕಾರ್ಜುನ ಮನಕರಗದವರಲ್ಲಿ ಯಾವುದನ್ನು ಒಲ್ಲ?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಚಂದನ, ಸುವರ್ಣ ಹಾಗೂ ಕಬ್ಬು ತಮ್ಮ ಮೂಲ ಗುಣಗಳನ್ನು ಹೇಗೆ ತೋರ್ಪಡಿಸುತ್ತದೆ?
2.ಕಂಪು ಮತ್ತು ಹೊಳಪು ಯಾವ ವಸ್ತುಗಳ ಗುಣಗಳಾಗಿವೆ?
3.ಮರ ಹಾಗೂ ರೂಪ ಫಲದಾಯಕವೆನ್ನಿಸಿಕೊಳ್ಳುವುದು ಯಾವಾಗ?
4.ಗಂಧಾಕ್ಷತೆ, ಆರತಿ ಮತ್ತು ಧೂಪ ಚೆನ್ನಮಲ್ಲಿಕಾರ್ಜುನ ಯಾವಾಗ ಒಲ್ಲ?

***ವಿವರವಾಗಿ ಉತ್ತರಿಸಿ:**

1.ಎಂಥ ಪರೀಕ್ಷೆ ಒಡ್ಡಿದರೂ ಮನುಷ್ಯ ತನ್ನ ಮೂಲ ಸತ್ವವನ್ನು ಕಳೆದುಕೊಳ್ಳಬಾರದು ಎಂಬ ಆಶಯ ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?
2.ವಸ್ತುಗಳ ಶ್ರೇಷ್ಠತೆಗೆ ಯಾವ ಯಾವ ಗುಣವಿರಬೇಕೆಂದು ಅಕ್ಕಮಹಾದೇವಿ ಹೇಳಿದ್ದಾಳೆ?
3.ಆಚರಣೆಗಿಂತ ಭಕ್ತಿ, ಭಾವ ಮುಖ್ಯ ಎಂಬುದು ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?

***ಭಾಷಾಭ್ಯಾಸ**

1. **ಇವುಗಳನ್ನು ಬಿಡಿಸಿ ಬರೆಯಿರಿ:**
   ಕಡಿದೊರೆದಡೆ, ಗಾಣದಲ್ಲಿಕ್ಕಿ, ಮುಂದಿಳುಹಲು, ಶರಣೆಂಬುದ, ಮಜ್ಜನವನೊಲ್ಲೆ, ಗಂಧಾಕ್ಷತೆ, ಕರಸ್ಥಳವನಿಂಬುಗೊಂಡೆ, ನೆಳಲಿಲ್ಲದನ್ನಕ್ಕ, ಹದುಳಿಗಲ್ಲದವರಲ್ಲಿ, ನೈವೇದ್ಯವನೊಲ್ಲೆಯಯ್ಯಾ
2. **ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**
   ಫಲ, ತಂದೆ, ಅಗಲ, ಅರೆ, ಅರಿ, ಕರಣ, ಭಾವ, ಕರ
3. **ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
   ತನು, ಸುವರ್ಣ, ಮರ, ಧನ, ಪುಷ್ಪ
4. **ಇವುಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ:**

ಸಕ್ಕರೆ, ಹೃದಯ, ಕಬ್ಬ

## ಕಠಿಣವಾದುದೆಲ್ಲ ಕಷ್ಟಕರವಲ್ಲ.

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಸುಲಭವಾದುದೆಲ್ಲ ಶುಭಕರವಲ್ಲ.
2.ಒಲವಿನಸಕ್ಕರೆಯ ದಯಪಾಲಿಸಯ್ಯ.
3.ವಿವೇಕದ ಕಡಿವಾಣವ ಕೊಡಯ್ಯ!
4.ನನ್ನ ನುಡಿಗೆ ನಿನ್ನ ಅರ್ಥ
5.ಕವಿಯ ಹೃದಯವ ಕರುಣಿಸಯ್ಯ!
6.ಒಂದರ ಬಾಹು ಇನ್ನೊಂದರ ಹೆಗಲ ಮೇಲೆ
7.ನರರಲ್ಲೇಕೆ ಗುಂಪುಗಾರಿಕೆ.

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಯಾವುದು ಶುಭಕರವಲ್ಲ?
2.ಎಂಥ ಕಡಿವಾಣ ಬೇಕು?
3.ಎಂತಹ ಹೃದಯ ಇರಬೇಕು?
4.ದಿಟದ ದಿಕ್ಸೂಚಿ ಯಾವುದು?
5.ಗುಂಪುಗಾರಿಕೆ ಗಾಂಪತನ ಯಾರಲ್ಲಿ ಇಲ್ಲ?

***ಬಹು ಆಯ್ಕೆಯ ಪ್ರಶ್ನೆಗಳು:**

1.ಸುಲಭವಾದುದೆಲ್ಲಾ_____
ಅ)ಕಷ್ಟಕರವಲ್ಲ ಆ)ಶುಭಕರವಲ್ಲ ಇ)ಗಾಂಪತನವಲ್ಲ ಈ)ಪರಿಪೂರ್ಣವಲ್ಲ
2.ಒಂದರ ಹಸ್ತ ಇನ್ನೊಂದರ _____
ಅ)ಹಸ್ತದಲ್ಲಿ ಆ)ಹೆಗಲಿನಲ್ಲಿ ಇ)ತಲೆಯಲ್ಲಿ ಈ)ನಡುವಲ್ಲಿ

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ ಏನಾಗುತ್ತದೆ?
2.ಯಾವುದನ್ನು ಕರುಣಿಸು ಕವಿ ಕೇಳಿಕೊಳ್ಳುತ್ತಾರೆ?
3.ನರರಲ್ಲಿ ಯಾವ ಯಾವ ಗುಣಗಳಿವೆ?

***ವಿವರವಾಗಿ ಉತ್ತರಿಸಿ:**

1.ದಾರಿ ಹಾಗೂ ಗುರಿಯ ಬಗ್ಗೆ ಸಿದ್ಧಯ್ಯ ಪುರಾಣಿಕರ ಅಭಿಪ್ರಾಯಗಳನ್ನು ವಿವೇಚಿಸಿ.
2.ಕವಿ ದೇವರಲ್ಲಿ ಸಲ್ಲಿಸುವ ಬೇಡಿಕೆಗಳೇನು?
3.'ಸಮರಸವೇ ಜೀವನ' –ಈ ಮಾತನ್ನು ಸಿದ್ಧಯ್ಯ ಪುರಾಣಿಕರ ವಚನದ ಹಿನ್ನಲೆಯಲ್ಲಿ ವಿವೇಚಿಸಿ.

***ಭಾಷಾಭ್ಯಾಸ**

1. **ಇವುಗಳನ್ನು ಬಿಡಿಸಿ ಬರೆಯಿರಿ:**
   ದಿಕ್ಸೂಚಿ, ಸೇರಲಾಗುದು, ನರರಲ್ಲೇಕೆ, ಹೊಮ್ಮುತ್ತಿರಬೇಕು, ಕರುಣಿಸಯ್ಯ, ಗಾಂಪತನವಿಲ್ಲ.
2. **ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**
   ನರ, ಹುಟ್ಟು, ತಿಳಿ, ಕವಿ, ಹರಿ, ಊರು
3. **ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
   ದಾರಿ, ಕುದುರೆ, ಹಸ್ತ
4. **ಇವುಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ:**
   ಶುಭ, ಸಮತೆ, ಸರಸ, ಹುಟ್ಟು, ಅರ್ಥ

## ಭಾಗ–2 : ಕೀರ್ತನೆಗಳು

## ಏನು ಓದಲೇನು ಫಲ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಮನವ ತೊಳೆಯಬಲ್ಲರೇ

2.ವೇಷದಾರಿಗಳಿಗೆ ಕಾಶಿಯಾತ್ರೆ ಫಲವು ಬಾ ಹೋದೆ

3.ಹರಿವ ನೀರಿನ ತೀರದಿ ಕುಳಿತರೇನು ಬಕ ಧ್ಯಾನದಿ.

4.ತಂದೆ ತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ.

5.ಏನು ಓದಲೇನು ಫಲ ಏನು ಕೇಳಲೇನು ಫಲ.

6.ಮೌನನೇಮ ನಿಷ್ಠೆ ಯಾಕೆ ಹೀನಚಿತ್ತನಾದ ಮೇಲೆ.

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಕಾಗೆಯಂತೆ ಮುಳುಗುವವರಿಗೆ ಯಾವ ಫಲವು ದೊರೆಯುವುದಿಲ್ಲ?

2.ಪರರ ಕೇಡನ್ನು ಬಯಸುವವರು ಯಾರನ್ನು ನಿಂದಿಸುತ್ತಾರೆ.

3.ಕಾಶಿಯಾತ್ರೆಯ ಫಲವು ಯಾರಿಗೆ ಸಿಗುವುದಿಲ್ಲ?

4.ಮಂದಮತಿಯ ಜನಗಳು ಏನು ಮಾಡುತ್ತಾರೆ?

5.ಹೀನ ಚಿತ್ತನಿಗೆ ಯಾವುದು ಬೇಡವಾಗುತ್ತದೆ?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಭಾಗ್ಯವಂತರೆಂದು ಯಾರನ್ನು ಕರೆಯಲಾಗುವುದಿಲ್ಲ?

2.ಯಾವುದನ್ನು ಬಕಧ್ಯಾನ ಎನ್ನಲಾಗಿದೆ?

3.ಕಾಸುವೀಸಕ್ಕಾಗಿ ತಿರುಗುವವರು ಏನು ಮಾಡುತ್ತಾರೆ?

4.ಪುರಂದರ ವಿಠಲನು ಯಾರನ್ನು ಮೆಚ್ಚುವುದಿಲ್ಲ?

***ವಿವರವಾಗಿ ಉತ್ತರಿಸಿ:**

1.ಡಾಂಭಿಕ ಜನರ ನಡವಳಿಕೆಯನ್ನು ದಾಸರು ಹೇಗೆ ವಿಡಂಬಿಸಿದ್ದಾರೆ?

2.ವಿಚಾರವಿಲ್ಲದ ಆಚರಣೆಯು ವ್ಯರ್ಥ ಎಂಬುದನ್ನು ಈ ಕೀರ್ತನೆಯ ಹಿನ್ನಲೆಯಲ್ಲಿ ವಿವೇಚಿಸಿ.

***ಭಾಷಾಭ್ಯಾಸ:**

**1.ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ರಾಗ, ಹರಿ, ತೊಳೆ, ವಿಷಯ, ಫಲ, ತಂದೆ

**2.ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ಧರೆ, ಯೋಗಿ, ವಿಪ್ರ, ತೀರ್ಥ, ಸ್ತ್ರೀ, ನೀರು

*******

# ಎರಡು ದಿನದ ಸಂಸಾರ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಶಿಶುವಿಗೆ ಪಾಲ್ಬೆಣ್ಣೆಯನುಣಿಸಬೇಕು.
2.ಬಾಳ್ವೆ ಸ್ಥಿರವೆಂದು ನೀ ನಂಬಿ ಕೆಡಬೇಡ.
3.ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ.
4.ಜ್ಞಾನದಲ್ಲಿ ದಾನ ಧರ್ಮವ ಮಾಡಿರಯ್ಯ.
5.ಕಳ್ಳತನಗಳ ಮಾಡಿ ಒಡಲ ಹೊರೆಯಲು ಬೇಡ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಹಸಿದು ಬಂದವರಿಗೆ_____
ಅ)ಆಶನ ನೀಡಬೇಕು ಆ) ಕರುಣೆ ತೋರಬೇಕು ಇ)ಪರಿತ್ಯಜಿಸಬೇಕು ಈ)ಓಡಸಬೇಕು
2.ಜ್ಞಾನದಲ್ಲಿ ಮಾಡಬೇಕಾದುದು _____
ಅ)ಊಟೋಪಚಾರ ಆ)ಧಾನ ಧರ್ಮ ಇ)ಭೋಗದ ಜೀವನ ಈ)ಕಾಯಕ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಕನಕದಾಸರು ಏನನ್ನು ಧಾರೆಯೆರೆಯಬೇಕೆನ್ನುತ್ತಾರೆ?
2.ಒಡಲನ್ನು ಹೇಗೆ ಹೊರೆಯಬಾರದು.
3.ತುಂಬಿದ ಸಭೆಯೊಳಗೆ ಯಾವುದು ಇರಬಾರದು?
4.ಸಿರಿ ಬಂದ ಕಾಲಕ್ಕೆ ಹೇಗಿರಬೇಕು?
5.ದೊರೆತನವು ದೊರೆತಾಗ ಏನು ಮಾಡಬಾರದು?
6.ಸಿರಿವಂತ ಯಾರು?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಆಶನ ಮತ್ತು ಪಾಲ್ಬೆಣ್ಣೆಯನ್ನು ಯಾರಿಗೆ ನೀಡಬೇಕು?
2.ಸಿರಿ ಮತ್ತು ದೊರೆತನಗಳು ಬಂದಾಗ ಮನುಷ್ಯನು ಹೇಗಿರಬೇಕು?
3.ಜೀವನದಲ್ಲಿ ಹೇಗೆ ಇರಬೇಕು?

***ವಿವರವಾಗಿ ಉತ್ತರಿಸಿ:**

1.ಕನಕದಾಸರು ಅನಿತ್ಯವಾದ ಬದುಕನ್ನು ಹೇಗೆ ಸಾರ್ಥಕ ಪಡಿಸಿಕೊಳ್ಳಬೇಕೆನ್ನುತ್ತಾರೆ?ವಿವರಿಸಿ.
2.ಎರಡು ದಿನದ ಸಂಸಾರ – ಈ ಕೀರ್ತನೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಭಾಷಾಭ್ಯಾಸ**

1. **ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**
   ಅರಸು, ಕಾಲ, ಆಡು, ಬೇಡ, ಹೊರೆ
2. **ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
   ಭೂಮಿ, ಚರಣ, ಒಡಲು, ಕಮಲ
3. **ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ:**
   ಜ್ಞಾನ, ಧರ್ಮ, ಸ್ಥಿರ, ಸಿರಿತನ
4. **ಇವುಗಳನ್ನು ಬಿಡಿಸಿ ಬರೆಯಿರಿ:**
   ಆಶನವೀಯಲು, ಪಾಲ್ಬೆಣ್ಣೆ, ಧಾರೆಯೆರೆ, ಪುಸಿಯಾಡದಲೆ, ಸಭೆಯೊಳಗೆ

*******

# ಯಾಕೆ ಮರುಳಾದೆ ಹೀಂಗೆ ಎಲೆ ಮನವೆ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಕಾಕು ಬುದ್ಧಿಯ ಬಿಡು.
2.ಧನದಾಸೆಯನು ಮರಿ.
3.ಈ ದೇಹ ಸ್ಥಿರವಲ್ಲವೊ.
4.ಮನುಮಥನ ಬಾಣಕಳುಕದಿರು.
5.ಔದಂಬ್ರ ಹಣ್ಣಿನಂತೀ ಕಾಯವು.
6.ಕಮಲ ಪತ್ರಕ್ಕೆ ಒಳಗಿನ ಜಲದಂತೆ.
7.ಭೇದ ದುರ್ಗುಣವ ತ್ಯಜಿಸು.
8.ವೆಂಕಟನ ಬೇಡಿ ಮುಕ್ತಿಯನು ಪಡೆಯೊ ಮನವೆ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಕಾಕು ಬುದ್ಧಿಯ ಬಿಡುವಂತೆ ಹೇಳಿರುವುದು_____
ಅ) ಜನರ ಮನಸ್ಸಿಗೆ ಆ) ಕೆಟ್ಟ ವ್ಯಕ್ತಿಗಳಿಗೆ ಇ) ವ್ಯಾಪಾರಸ್ಥರಿಗೆ ಈ) ಹೆಂಗಸರಿಗೆ
2.ನಾವು ಮರೆಯಬೇಕಾದುದು_____
ಅ)ದು:ಖವನ್ನು ಆ)ಧನದಾಸೆಯನು ಇ)ಹಸಿವನ್ನು ಈ)ಜನರನ್ನು
3.ಔದಂಬ್ರ ಹಣ್ಣಿನಂತಿರುವುದು_____
ಅ)ದೇಹ ಆ)ಕೆಲಸ ಇ)ಭಾಷೆ ಈ)ಮಾತು

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಕಾಕು ಬುದ್ಧಿಯನ್ನು ಬಿಡುವಂತೆ ಯಾರಿಗೆ ಹೇಳಲಾಗಿದೆ?
2.ಏನನ್ನು ಮರೆಯಬೇಕು?
3.ಮನಸ್ಸು ಹೇಗಿರಬೇಕು?
4.ಸಂಸಾರವನ್ನು ಹೇಗೆ ನಿರ್ವಹಿಸಬೆಕು?
5.ಯಾವುದು ಸ್ಥಿರವಲ್ಲ?
6.ನಿರ್ಲೇಪವಾಗುವುದು ಹೇಗೆ?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಮನಸ್ಸಿನ ತೊಳಲಾಟಕ್ಕೆ ಕಾರಣವಾದ ಸಂಗತಿಗಳಾವುವು?
2.ಸಂಸಾರದಲ್ಲಿ ಮನಸ್ಸು ನೆಲೆಯಾಗಿರಬೇಕಾದ ಬಗೆ ಹೇಗೆ?
3.ದೇಹದಲ್ಲಿ ಮನಸ್ಸು ಇರಬೇಕಾದ ರೀತಿಯನ್ನು ತಿಳಿಸಿ?

***ವಿವರವಾಗಿ ಉತ್ತರಿಸಿ:**

1.ಮನಸ್ಸು ಯಾವ ರೀತಿಯಲ್ಲಿ ವ್ಯವಹರಿಸಿದರೆ ಜೀವನ ಚೆನ್ನಾಗಿರುತ್ತದೆ?
2.ಗಿರಿಯಮ್ಮ ಚಿತ್ರಿಸಿರುವ ಮನೋವೈಪರೀತ್ಯಗಳಾನ್ನು ವಿವರಿಸಿ.
3.ಮಾಗಿದ ಮನಸ್ಸು ಇರಬೇಕಾದ ಬಗೆ ಇಲ್ಲಿ ಹೇಗೆ ವ್ಯಕ್ತವಾಗಿದೆ?

***ಭಾಷಾಭ್ಯಾಸ**

**1. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**
ಮರಿ, ಕಾಲ, ಪತ್ರ, ತಿಳಿ, ಹರಿ

**2. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
ಕಮಲ, ದೇಹ, ಧನ

**3. ಇವುಗಳಿಗೆ ತತ್ಸಮ – ತದ್ಭವಗಳನ್ನು ಬರೆಯಿರಿ:**

ಆಸೆ, ಭಕ್ತಿ, ಮುಕ್ತಿ

## ಭಾಗ–3 : ಜನಪದ ಹಾಗೂ ತತ್ವಪದ,
## ಚಿಕ್ಯಾಗ ಚೆಲುವ ಚಂದ್ರಾಮ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಮಾಸಿದ ತಲೆಯು ಮಡಿಯಾಯ್ತು.
2.ಹಡೆದವ್ವಗ ಬೈದರ ಬಾಳ ಮರುಗ್ಯಾಳ ಮನದಾಗ.
3.ನೆಲ್ಲ ಬಾನಿಯಿರುವ ಮನಿಯಿರಲಿ.
4.ಮಾವೀನ ಹೋಳು ನಿನ ಕಣ್ಣು.
5.ಮಲ್ಲಿಗೆ ಮಾಯೆ ಬಿಡಲಾರೆ.
6.ಅಂಜಿ ತಿರುಗುವರ ಸೊಸೆಯಲ್ಲ.
7.ತನ್ನ ಮಗಳಾಂಗ ನೋಡಿದರ ಕಣ್ಣ ಮುಂದಾದ ಕೈಲಾಸ.
8.ಬಂಗಾರ ನಿನ್ನಗೆ ಸ್ಥಿರವಲ್ಲ.
9.ಬೆನ್ನು ಕಟ್ಟುವರು ಸಭೆಯೊಳಗೆ
10.ಸನ್ನೇಶಿ ಶಿವ ತಾ ಕೊಡಲಿಲ್ಲ.
11.ಹುಟ್ಟಲಿಲ್ಲವೆ ನಾನು ಮನೆಯಾಗೆ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಹಡೆದವ್ವ ನೆನೆದರ ಮಾಸೀದ ತಲೆಯು_____
ಅ)ಹೊಡೆಯಿತು ಆ)ಮಡಿಯಾಯ್ತು ಇ)ಕೆಟ್ಟೊ ಹೋಯಿತು ಈ)ಹಾಳಾಯಿತು
2.ತನ್ನ ಮಗಳಾಂಗ ನೋಡಿದರ ಕಣ್ಣ ಮುಂದಾದ_____
ಅ)ಕೈಲಾಸ ಆ)ಸ್ವರ್ಗ ಇ)ನರಕ ಈ)ವೈಕುಂಠ
3.ಸಭೆಯೊಳಗ ಸಾವಿರ ಹೊನ್ನು ಕಟ್ಟುವರು_____
ಅ)ತಲೆಯಲ್ಲಿ ಆ)ಚೀಲದಲ್ಲಿ ಇ)ಉಡಿಯಲ್ಲಿ ಈ)ಮೈಯಲ್ಲಿ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಯಾರ ನೆನಪಿನಿಂದ ತಂಗಳು ಬಿಸಿಯಾಗುತ್ತದೆ?
2.ಹಡೆದವ್ವ ಮರುಗುವುದು ಯಾವಾಗ?
3.ತಾಯಿ ಮಗುವಿನ ಕಣ್ಣುಗಳನ್ನು ಯಾವುದಕ್ಕೆ ಹೋಲಿಸಿದ್ದಾಳೆ?
4.ಹೆಣ್ಣಿನ ಜನ್ಮಕ್ಕೆ ಯಾರು ಇರಬೇಕೆಂದು ಗರತಿ ಬಯಸುತ್ತಾಳೆ?
5.ಬಿಂದಿಗೆ ಹಾಲನ್ನು ಬಯಸಿದವರಾರು?
6.ಯಾವುದು ಸ್ಥಿರವಲ್ಲವೆಂದು ಗರತಿ ಹೇಳಿದ್ದಾಳೆ?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಅಕ್ಕ ತನ್ನ ತಮ್ಮನಿಗೆ ಹೇಳಿದ ತಿಳುವಳಿಕೆ ಯಾವುದು?
2.ತಾಯಿ ಮನೆಯಲ್ಲಿ ಏನೆಲ್ಲ ಇರಲಿ ಎಂದು ಗರತಿ ಬಯಸುತ್ತಾಳೆ?
3.ಮಗು ಯಾವ ರೀತಿ ವರ್ತಿಸುತ್ತದೆ ಎಂದು ತಾಯಿ ಹೇಳುತ್ತಾಳೆ.
4.ಮಡದಿ ತವರಿಗೆ ಹೋದಾಗ ಪತಿಯ ಭಾವವೇನು?
5.ಅತ್ತೆ, ಸೊಸೆಯ ಸಂಬಂಧದ ಕುರಿತು ಜನಪದರು ಏನೇನ್ನುತ್ತಾರೆ?
6.ಕಣ್ಣ ಮುಂದೆ ಕೈಲಾಸ ಕಾಣುವುದು ಯಾವಾಗ?
7.ಗರತಿಯು ಬಣ್ಣಿಸಿರುವ ಪ್ರಕೃತಿಯ ಚೆಲುವು ಎಂತಹುದು?
8.ಅಣ್ಣ–ತಮ್ಮಂದಿರ ಬಗ್ಗೆ ಗರತಿಯು ಹೊಂದಿದ ಉದಾತ್ತ ನಿಲುವೇನು?
9.ಜನಪದರು ಹೆಣ್ಣು ಮಗುವಿನ ಜನನಕ್ಕಾಗಿ ಹಂಬಲಿಸುವ ಬಗೆ ಹೇಗೆ?
10.ತಂಗಿ ತವರು ಮನೆಯ ಹಕ್ಕೊತ್ತಾಯವನ್ನು ಹೇಗೆ ಸ್ಥಾಪಿಸುತ್ತಾಳೆ?

***ವಿವರವಾಗಿ ಉತ್ತರಿಸಿ:**

1.ಜನಪದ ತ್ರಿಪದಿಯಲ್ಲಿ ತಾಯಿ–ಮಗುವಿನ ವಾತ್ಸಲ್ಯಭಾವ ಹೇಗೆ ಮೂಡಿ ಬಂದಿದೆ? ವಿವರಿಸಿ.

2.ಗರತಿಯ ಹಾಡಿನಲ್ಲಿ ಮೂಡಿ ಬಂದಿರುವ ಕೌಟುಂಬಿಕ ಚಿತ್ರಣವನ್ನು ಸಂಗ್ರಹಿಸಿಬರೆಯಿರಿ.

***ಭಾಷಾಭ್ಯಾಸ**

**1.ಗ್ರಾಂಥಿಕ ರೂಪಗಳನ್ನು ಬರೆಯಿರಿ:**

ತಂದೀಯ, ತಂಗೂಳ, ಕೊಟ್ಟವ್ವಗ, ಕಾಡಿಗಚ್ಚಿದ, ಅಡಗೀಯಮನಿಯಾಗ, ತನ್ನಂಗ, ಹಕ್ಕಿಪಕ್ಯಾಗ, ಬಳಿಯುಟ್ಟು, ಹಟ್ಟಿಲಾರೆಮ್ಮೆ, ಬಾಳ, ಮರುಗ್ಯಾಳ, ಮನದಾಗ, ಚೆಂಜೀಯ, ಹೋಗ್ಯಾಳ, ಜನುಮ, ಚಿಕ್ಕಾ ್ಯಗ, ಹೊಳ್ಳು,ಸನ್ನೇಸಿ

**2.ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ತಲೆ, ಚಂದ್ರ, ಹೊನ್ನು, ಮಡಿ, ಕಮಲ, ಮಡದಿ, ತಾಯಿ, ಕಣ್ಣು, ಬಂಗಾರ

**3.ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಮಡಿ, ತಂದೆ, ತಿಳಿ, ಹುಟ್ಟು, ಕಂದ, ನೆನೆ, ಎಡೆ.

**4.ಪದಗಳನ್ನು ಬಿಡಿಸಿ ಬರೆಯಿರಿ:**

ಮಡಿಯಾಯ್ತು, ಹಡೆದವ್ವ, ನಿನ್ನನಗಲಿ, ಸಭೆಯೊಳಗೆ, ಬಳಿಯುಟ್ಟು, ಕಾಡಿಗ್ಹಚ್ಚಿದ, ನನಗೊಂದ

*******

# ಬಣ್ಣದ ಗುಬ್ಬ್ಯಾರು ಮಳಿರಾಜ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಮಕ್ಕಳ ಮಾರ್‍ಯಾರ ಮಳಿರಾಜಾ.
2.ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ.
3.ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ.
4.ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು.
5.ಮಣ್ಣಾಗಿ ಹೋದರು ಮಳಿರಾಜಾ.
6.ಹಳ್ಳ–ಕೊಳ್ಳ ಹೆಣ ಹರಿದಾಡಿ ಹೋದವು.

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋಗಲು ಕಾರಣವೇನು?
2.ಗಿದ್ದನ ಅಕ್ಕಿಯಲ್ಲಿ ಏನನ್ನು ಕೂಡಿಸಿದರು?
3.ಒಕ್ಕಲ ಏರಿಯಲ್ಲಿ ಜನರು ಏನು ಮಾಡಿದರು?
4.ಸೊಲಗಿ ಹಿಟ್ಟಿನಲ್ಲಿ ಏನನ್ನು ಕೂಡಿಸಿ ತಿನಿಸುತ್ತಾರೆ?
5.ಭಿಕ್ಷಕ್ಕೆ ಹೋದವರು ಯಾರು?
6.ಮಳೆ ಬಾರದಿದ್ದಾಗ ವರ್ತಕರು ಏನು ಮಾಡಿದರು?

***ಎರಡು ವಾಕ್ಯಗಳಲ್ಲಿ ಉತ್ತರಿಸಿ:**

1.ಹಳ್ಳ–ಕೊಳ್ಳದಲ್ಲಿ ಹೆಣಗಳು ಯಾವಾಗ ಹರಿದಾಡಿ ಹೋದವು?
2.ಸಣ್ಣ ಮಕ್ಕಳು ಕಣ್ಣನ್ನು ಮುಚ್ಚಲು ಕಾರಣವೇನು?
3.ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋಗಲು ಕಾರಣವೇನು?
4.ಕೇರಿ ಜನ ಒದ್ದಾಡಿ ಸಾಯಲು ಕಾರಣವೇನು?

***ವಿವರವಾಗಿ ಉತ್ತರಿಸಿ:**

1.ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿ.
2.'ಬಣ್ಣದ ಗುಬ್ಬ್ಯಾರು ಮಳಿರಾಜಾ' ಹಾಡಿನಲ್ಲಿ ಬರಗಾಲದ ಭೀಕರತೆಯ ವಿವಿಧ ಮುಖಗಳು ಹೇಗೆ ಮೂಡಿ ಬಂದಿವೆ?ವಿವರಿಸಿ.

***ಭಾಷಾಭ್ಯಾಸ**

**1. ಗ್ರಾಂಥಿಕ ರೂಪಗಳನ್ನು ಬರೆಯಿರಿ:**

ಅನ್ನದ, ಮರ್‍ಯಾರ, ಹಿಟ್ಟಿನ್ಯಾಗ, ಕೂಡಿಸ್ಯಾರ, ಮುಚ್ಚ್ಯಾವ, ಭಿಕ್ಷುಕ, ಉಣಿಸ್ಯಾರ, ತಿರಗ್ಯಾರ, ಸತ್ತಾರ, ಅಕ್ಕ್ಯಾಗ, ಉಣಿಸ್ಯಾರ, ಬಾಲ್ಯಾರು.

**2. ನುಡಿಗಟ್ಟನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ:**

ಮಣ್ಣಾಗಿ ಹೋಗು, ಕಣ್ಣುಮುಚ್ಚು.

**3. ತತ್ಸಮ– ತದ್ಭವಗಳನ್ನು ಬರೆಯಿರಿ:**

ಬಣ್ಣ, ರಾಜ, ಭಿಕ್ಷೆ

*******

## ಶ್ರೀ ಗುರುವಚನೋಪದೇಶ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ದುರಿತ ಕರ್ಮವನೊಲ್ಲದಿರು.
2.ಕರುಣವಿರಲಿ ಜೀವರೊಳು.
3.ನಿಂದಿಸಿ ನುಡಿಯದಿರಾರನು.
4.ಕಾಮಾದಿಗಳ ಜಯಿಸೆಂದು ಕೈ ಪಿಡಿದನುಗ್ರಹಿಸುವ
5.ಸಂಪದದೊಳು ತವೆ ಮದವಳಿದಿರು.
6.ವೇದವಿದಭಕ್ತಿಗಳನಗಲದಿರು.
7.ಆರು ನಾನೆಂದು ವಿಚಾರಿಸು.

***ಬಹು ಆಯ್ಕೆಯ ಪ್ರಶ್ನೆಗಳು:**

1.ಗುರುವಚನೋಪದೇಶವನಾಲಿಸಿದಾಗ ಸಿಗುವುದು_____
ಅ)ದೊರೆಯುವುದು ಭಕ್ತಿ ಆ)ನರರಿಗೆ ಮುಕ್ತಿ ಇ)ದುರಿತ ಕರ್ಮ ಈ)ಘೋರ ಪಾಪ
2.ಜೀವರೊಳು ಇರಬೇಕಾದುದು_____
ಅ)ಕರುಣೆ ಆ)ಭಕ್ತಿ ಇ)ಕ್ರೂರತೆ ಈ)ಸಂಪದ
3.ಎಡರು ಬಂದು ಕವಿದಾಗ _____
ಅ)ತಲೆ ದೂಗಬಾರದು ಆ) ಅಂಜಬಾರದು ಇ)ನಿದ್ದೆ ಮಾಡಬೇಕು ಈ)ಓಡಾಡಬೇಕು
4.ನಮ್ಮನ್ನು ಗಂಭೀರ ಸುಖದೊಳಿರಿಸುವವ _____
ಅ)ಶಂಭುಲಿಂಗ ಆ)ವಿಷ್ಣು ಇ)ಶ್ರೀಮಂತ ಈ)ಸನ್ಯಾಸಿ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ನರರಿಗೆ ಮುಕ್ತಿ ದೊರೆಯುವುದು ಯಾವಾಗ?
2.ಯಾರ ಜೊತೆ ಒಡನಾಟವಿರಬೇಕು?
3.ಯಾವುದನ್ನು ಒಪ್ಪಬಾರದು?
4.ಜೀವಿಗಳಲ್ಲಿ ಏನಿರಬೇಕು?
5.ಯಾರನ್ನು ಪೊರೆಯಬೇಕು?
6.ಯಾವಾಗ ಅಂಜಬಾರದು?
7.ಯಾವುದನ್ನು ಜಯಿಸಬೇಕು?
8.ಯಾವುದನ್ನು ಆಲಕ್ಷಿಸಬೇಕು?
9.ಯಾರನ್ನು ವಿವರಿಸಿ ನೋಡಬೇಕು?
10.ಬಾಹ್ಯದಲ್ಲಿ ಏನನ್ನು ಬಳಸಬಾರದು?
11.ಯಾವುದನ್ನು ಆಗಲಬಾರದು?
12.ವಿಷಮ ಸಂಸಾರವನ್ನು ಏನೆಂದು ಆರಿಯಬೇಕು?
13.ಗಂಭೀರ ಸುಖವನ್ನು ಹೇಗೆ ಪಡೆಯಬಹುದು?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಭಗವಂತನ ಅನುಗ್ರಹಕ್ಕೆ ಪಾತ್ರನಾಗುವಲ್ಲಿ ನಡೆ–ನುಡಿಗಳು ಹೇಗಿರಬೇಕು?
2.ಶಿಷ್ಯನಿಗೆ ಯಾವ ಗುಣಗಳನ್ನು ತ್ಯಜಿಸಲು ಗುರು ಹೇಳುತ್ತಾರೆ?
3.ಬದುಕಿನಲ್ಲಿ ಯಾವ ತತ್ತ್ವಗಳನ್ನು ಅಳವಡಿಸಿಕೊಳ್ಳಲು ಗುರು ಶಿಷ್ಯರಿಗೆ ಉಪದೇಶಿಸುತ್ತಾರೆ?

***ವಿವರವಾಗಿ ಉತ್ತರಿಸಿ:**

1.ನರರು ಮುಕ್ತಿ ಪಡೆಯಲು ಯಾವ ಯಾವ ಮಾರ್ಗಗಳನ್ನು ಅನುಕರಿಸಬೇಕೆಂದು ನಿಜಗುಣ ಶಿವಯೋಗಿಯವರು ಹೇಳಿದ್ದಾರೆ.

2.ನಿಜಗುಣ ಶಿವಯೋಗಿಯವರ ತತ್ತ್ವಪದದಲ್ಲಿ ವ್ಯಕ್ತವಾದ ಸಾತ್ವಿಕ ಅಂಶಗಳನ್ನು ಕ್ರೋಢೀಕರಿಸಿ ಬರೆಯಿರಿ.

***ಭಾಷಾಭ್ಯಾಸ**

**1. ತತ್ಸಮ-ತದ್ಭವ ಪದಗಳನ್ನು ಬರೆಯಿರಿ:**

ಶ್ರೀ, ಮುಕ್ತಿ, ಭಕ್ತಿ, ಸುಖ

**2. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಪೊರೆ, ಅಡಿ, ಕವಿ, ಆರು, ಅಳಿ, ಸಮಯ, ಅರಿ, ಉಸಿರು.

**3. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ನರ, ಹರ, ಭವ, ಮಾಲೆ, ಮಾರ, ಅಂಜು.

**4. ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ:**

ಪಾಪ, ಸಮ, ಇಹ, ಸುಖ, ಜಯ, ಅದ್ವೈತ

*******

## ಭಾಗ–4 : ಹೊಸಗನ್ನಡ ಕಾವ್ಯ

### ಮಾವಿನ ಗೊಲ್ಲೆ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಒಂದೋ ಬಲು ಹಿರಿದು.
2.ಸಂಪ್ರೀತಿಯ ಸುರರು.
3.ಎಲ್ಲಾ! ಒಂದೇ ದೇಟಿನ ಕಾಯಿಗಳು.
4.ಒಂದೋ ಹುಳಿ ಹೀಚು
5.ರೊಚ್ಚಿನ ರಕ್ಕಸರು.

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ನಾವು ಯಾರ ದೇಟಿನ ಕಾಯಿಗಳು?
2.ರೊಚ್ಚಿನವರು ಯಾರು?
3.ಸುರರ ಗುಣ ಯಾವುದು?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಮಾವಿನ ಕಾಯಿಗಳಲ್ಲಿರುವ ಭೇದ ಯಾವುದು?
2.ದೇವನ ದೇಟಿನ ಕಾಯಿಗಳಲ್ಲಿರುವ ವ್ಯತ್ಯಾಸ ಯಾವುದು?

***ವಿವರವಾಗಿ ಉತ್ತರಿಸಿ:**

1.ಮಾವಿನ ಗೊಲ್ಲೆ ಕವಿತೆಯ ಆಶಯವೇನು?
2.ಮಾವಿನ ಗಿಡದ ಮೂಲಕ ಕವಿ ಸೃಷ್ಟಿಯ ವೈವಿಧ್ಯತೆಯನ್ನು ಹೇಗೆ ವಿವರಿಸಿದ್ದಾರೆ?

***ಭಾಷಾಭ್ಯಾಸ**

**1. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**
ಸವಿ, ರೊಚ್ಚು

**2. ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ:**
ಚಿಕ್ಕದು, ಹಿರಿದು, ಸುರ

**3. ತತ್ಸಮ – ತದ್ಭವ ಬರೆಯಿರಿ:**
ಪ್ರಾಣಿ, ರಕ್ಕಸ, ಸುರ

*******

## ಶ್ರಾವಣ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಏನೊ ಎಂತೊ ಒರಲುತಿಹುದು.
2.ಹೇಳೊಹೇಳು ಶ್ರಾವಣಾ, ನೀನು ಬಂದ ಕಾರಣ.
3.ನೀರ ಬೆಳಕು ತುಣುಕು ಮಿಣುಕು.
4.ಮತಿಯ ಹೆಳಲ ಮುಡಿಸಿತು.
5.ಸೂಸು ಸೊಗಸು ಆನಂದ.
6.ಗುಳ್ಳಗಂಜಿ ತೊಡವ ತೊಟ್ಟು.
7.ಹಾವಸೆಯ ಉಡುಪನುಟ್ಟು.
8.ಅಳಲು ನಗಲು ತಡವೆ ಇಲ್ಲ.
9.ಹೆಣ್ಣೆ ತವರು ಮನೆಯ ವಾಸ.
10.ಮೋಡ ಕವಿದ ಕಣ್ಣಿನವನು.
11.ಮಧು ಮಾಸಕು ಹಿರಿದದು.
12.ಎದೆಯ ಸೆರಗ ನೆನಸಿತು.

***ಬಹು ಆಯ್ಕೆಯ ಪ್ರಶ್ನೆಗಳು:**

1.ನೆಲದ ಮುಗಿಲ ಮಗ್ಗುಲಲ್ಲಿ ಹೊರಳುತಿಹುದು _____
ಅ)ಹಸಿರಿನ ಹಸುಗೂಸು ಆ)ಮಂಜಿನ ರಾಶಿ ಇ)ಕಪ್ಪುಮೋಡ ಈ) ತಾರೆಗಳು
2.ಗಾಳಿಕುದುರೆಯನ್ನು ಏರಿ ಬಂದಿರುವುದು _____
ಅ)ಸೂರ್ಯ ಆ)ಪರ್ಜನ್ಯ ಇ)ಚಂದ್ರ ಈ)ನಕ್ಷತ್ರ
3.ನಗುವ ತುಟಿಯ ನೆನೆದ ಎವೆಯ ತರಳ_____
ಅ)ಶ್ರಾವಣಾ ಆ)ಮಗು ಇ)ಮನ್ಮಥ ಈ)ಆನಂದ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ನೆಲದ ಮುಗಿಲ ಮಗ್ಗುಲಲ್ಲಿ ಒರಲುತ್ತಿರುವುದು ಯಾವುದು?
2.ಪರ್ಜನ್ಯ ಗೀತವನ್ನು ಹಾಡುತ್ತಾ ಬಂದವರು ಯಾರು?
3.ಶ್ರಾವಣ ಯಾವ ಜಡೆಯನ್ನು ಮುಡಿಸಿತು?
4.ಶ್ರಾವಣ ಯಾವ ಆಭರಣವನ್ನು ತೊಟ್ಟಿದ್ದಾನೆ?
5.ಶ್ರಾವಣ ಯಾವ ಉಡುಪನ್ನುಟ್ಟು ಬಂದಿತು?
6.ಕವಿ 'ತುಂಟ ಹುಡುಗ' ಎಂದು ಯಾರನ್ನು ಕರೆದಿದ್ದಾರೆ?
7.ಬನದ ಮರದ ಮೇಳ ಹೇಗೆ ಶಬ್ದ ಮಾಡಿತು?
8.ಯಾವಾಗ ಹೆಣ್ಣಿಗೆ ತವರು ಮನೆಯ ವಾಸವಿರುತ್ತದೆ?
9.ಮುಗಿಲ ರಾಯ ಯಾರು?
10.ಶ್ರಾವಣನನ್ನು ಹೆತ್ತವಳು ಯಾರು?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಹಸಿರ ಒಳಗಿಂದ ಹಸುಗೂಸು ಬಂದ ಬಗೆ ಹೇಗೆ?
2.ಶ್ರಾವಣ ಬಂದ ಬಗೆಯನ್ನು ತಿಳಿಸಿ.
3.ಶ್ರಾವಣ ಬರುವಾಗಿನ ಅಂದ ಚೆಂದ ಯಾವುದು?
4.ತರಳ ಶ್ರಾವಣನ ರೂಪ ಹೇಗಿದ್ದಿತು?
5.ಭೂತಾಯಿ ಶ್ರಾವಣನನ್ನು ಸ್ವಾಗತಿಸಿದ್ದು ಹೇಗೆ?
6.ಶ್ರಾವಣ ಮಾಸದ ವಿಶೇಷತೆಯೇನು?

***ವಿವರವಾಗಿ ಉತ್ತರಿಸಿ:**

1.ಶ್ರಾವಣ ಕವಿತೆಯಲ್ಲಿ ವ್ಯಕ್ತವಾದ ನಿಸರ್ಗ ವೈಭವವನ್ನು ಚಿತ್ರಿಸಿ.
2.ಶ್ರಾವಣದ ಆಗಮನದಿಂದ ಇಳೆಯಲ್ಲಾದ ಬದಲಾವಣೆಗಳನ್ನು ಚಿತ್ರಿಸಿ.

***ಭಾಷಾಭ್ಯಾಸ**

**1. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ತಂದೆ, ಮತಿ, ಕವಿ, ಮಣಿ, ನೆನೆ, ಮಾಡು

**2. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ನೆಲ, ನೀರು, ಹಾವು, ಕುದುರೆ, ತಂದೆ, ಕೂಸು, ಗಾಳಿ, ಪರ್ಜನ್ಯ, ಮರ, ಹೆಳಲು ತಾಯಿ, ರಾಯ

# ರೈತನ ದೃಷ್ಟಿ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ.
2.ನಮ್ಮವರೆ ಹದಹಾಕಿ ತಿವಿದರದು ಹೂವೆ.
3.ಬಾಯ್ದೆರೆದು ನೋಳ್ಪ ಬೆಪ್ಪಾಗಬೇಕೇನು?
4.ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ।
5.ನೆತ್ತರಿಲ್ಲದೆ ಸುಕ್ಕಿ ಸೊರಗಿದೆನ್ನಾಣೆ।
6.ಸಾಮ್ರಾಜ್ಯಕಾಳಿಗಾನಲ್ತೆ ಕುರಿ ಕೊತಿಗೆ ।
7.ಬಡತನದ ಗೊಬ್ಬರವನನು ದಿನಂ ಹೀರಿ.
8.ಸಾಕೆನಗೆ, ಸಾಕಯ್ಯ, ಸಾಮ್ರಾಜ್ಯ ಪೂಜೆ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಸುಲಿಗೆಗೆ ಒಳಗಾಗುವವರು _____
ಅ)ರೈತರು ಆ)ವರ್ತಕರು ಇ)ರಾಜಕಾರಣಿಗಳು ಈ)ಶ್ರೀಮಂತರು
2.ಸೋಮಾರಿಗಳಿಗೆ ಸುಖಿಗಳಿಗೆ ರಸೀಕರಿಗೆ ಸಾಮ್ರಾಜ್ಯವೆಂಬುದು _____
ಅ)ಆಡಂಬರ ಆ)ಕಾಮಧೇನು ಇ)ಹೆಮ್ಮೆ ಈ)ಹಬ್ಬ
3.ತಿಂದುಂಡು ಮೆರೆವವರ ಮೆರವಣಿಗೆಯನು ಬಾಯ್ದೆರೆದು ನೋಡುವವನು_____
ಅ)ರೈತ ಆ)ಶ್ರೀಮಂತ ಇ)ಕವಿ ಈ)ಮಂತ್ರಿ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಸುಲಿಗೆಗೆ ಒಳಗಾಗುವವರು ಯಾರು?
2.ಸಾಮ್ರಾಜ್ಯವೆಂಬುದು ಯಾರ ಪಾಲಿಗೆ ಕಾಮಧೇನು?
3.ಕಳ್ಳರೊಡೆಯನು ಯಾರು?
4.ಬಾಯ್ದೆರೆದು ನೋಡುವ ಬೆಪ್ಪನಾದವನು ಯಾರು?
5.ಸಾಮ್ರಾಜ್ಯ ಕಾಳಿಗೆ ಬಲಿಯಾಗುವ ಕುರಿ ಯಾರು?
6.ಕುಲಯ್ಗುರಿಯನ್ನು ಯಾವ ಗರಗಸದಿಂದ ಸೀಳುವರು?
7.ನೆತ್ತರಿಲ್ಲದೆ ಸೊರಗಿದವನು ಯಾರು?
8.ಬಡತನದ ಗೊಬ್ಬರವನ್ನು ಹೀರಿ ಮೆರೆದವರು ಯಾರು?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಯಾರನ್ನು ಜಿಗಣೆಗಳಿಗೆ ಹೋಲಿಸಲಾಗಿದೆ?
2.ತಿಂದುಂಡು ಮೆರೆದವರು ಯಾರು ಯಾರು?
3.ಕರುಣೆಯ ಗರಗಸ ಯಾವ ಬಗೆಯದು?
4.ಸಾಮ್ರಾಜ್ಯ ಪೂಜೆ ಹೇಗೆ ನಡೆಯುತ್ತದೆ?
5.ರೈತನು ಯಾರಿಗೆ ಮರುಳಾಗೆನೆಂದಿದ್ದಾನೆ?

***ವಿವರವಾಗಿ ಉತ್ತರಿಸಿ:**

1.ರೈತನನ್ನು ಸಾಮಾಜ್ಯ ಕಾಳಿಗೆ ಕೊಡುವ ಬಲಿ ಎಂದು ಏಕೆ ಹೇಳಲಾಗಿದೆ?
2.'ರೈತನ ದೃಷ್ಟಿ'ಕವಿತೆಯಲ್ಲಿ ವ್ಯಕ್ತವಾಗಿರುವ ಆಶಯಗಳೇನು?
3.ಸಾಮ್ರಾಜ್ಯ ಪೂಜೆ ಸಾಕು, ರೈತನ ಉದ್ಧಾರವಾಗಬೇಕು ಎಂಬ ವಿಚಾರ –ಧಾರೆ ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ?

***ಭಾಷಾಭ್ಯಾಸ**

**1. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಕರಿ, ಮುಡಿ, ಮರುಳು

**2. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ನೆತ್ತರು, ನೃಪ, ಹೂವು, ಕತ್ತಿ, ನೃಪ

**3. ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ:**

ಸುಖಿ, ಸಾವು, ಪರದೇಶಿ

**4. ತತ್ಸಮ–ತದ್ಭವ ಬರೆಯಿರಿ:**

ಹಬ್ಬ, ಸಿರಿ, ಮೂರ್ತಿ, ಕಸ್ತೂರಿ, ಬಸವ

*******

# ಎಲ್ಲರೊಳಗೊಂದಾಗು

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಬೆಳಕೀವ ಸೂರ್ಯ ಚಂದ್ರರದೊಂದು ಸದ್ದಿಲ್ಲ.
2.ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ.
3.ಗಿಣಿಯೋದು ಪುಸ್ತಕ ಜ್ಞಾನ.
4.ಹೊಲಿ ನಿನ್ನ ತುಟಿಗಳನು.
5.ಎಲ್ಲರೊಳಗೊಂದಾಗು.
6.ಗಟ್ಟಿತನ ಗರಡಿ ಫಲ.
7.ನಿನ್ನನುಭವವೆ ನಿನಗೆ ಧರುಮದ ದೀಪ.
8.ದೊರೆತದು ಹಸಾದವೆಂದುಣ್ಣು.
9.ಹೊರಡು ಕರೆ ಬರಲಳದೆ.
10.ಶ್ವಾಸವದು ಬೊಮ್ಮನದು.

***ಬಹು ಆಯ್ಕೆಯ ಪ್ರಶ್ನೆಗಳು:**

1.ತಮಟೆಗಳ ಶಬ್ದವಿಲ್ಲದಿರುವುದು_____
ಅ)ಜಾತ್ರೆಯಂದು ಆ)ಮೊಳಕೆಯೊಗೆವಂದು ಇ)ಮರಣಹೊಂದಿದಂದು ಈ)ಸೂತಕದಂದು

2.ಕಷ್ಟಗಳ ಮಳೆ ವಿಧಿ ಸುರಿದಾಗ_____
ಅ)ಕಲ್ಲಾಗಬೇಕು ಆ)ಸಂತೋಷಪಡಬೇಕು ಇ)ವಿಜೃಂಭಿಸಬೇಕು ಈ)ಚಿಂತಿಸಬೇಕು

3.ಅನುಭವವೇ ನಮಗೆ _____
ಅ)ಧರುಮದ ದೀಪ ಆ)ವ್ಯಸನವನ್ನೀಯುವುದು ಇ)ಚಿಂತೆಯನ್ನೀವುದು ಈ)ಆನಂದವೀಯುವುದು

4.ಕಿರಿದೆನದೆ ಮನವಿಟ್ಟು ಮಾಡಬೇಕಾದುದು_____
ಅ)ಊಟ ಆ)ಕೆಲಸ ಇ)ಸಾಹಸ ಈ)ವಿಚಾರ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ತುತ್ತೂರಿಯ ದನಿ ಯಾವಾಗ ಇರುವುದಿಲ್ಲ?
2.ಯಾವುದರಲ್ಲಿ ಸವಿ-ಸೊಗವಿಲ್ಲ?
3.ಗಟ್ಟಿತನ ಯಾವುದರ ಫಲ.
4.'ಧರುಮದ ದೀಪ'ಯಾವುದು?
5.ಕೆಲಸವನ್ನು ಹೇಗೆ ಮಾಡಬೇಕು?
6.ಕಾಶಿಯ ಶಾಸ್ತ್ರಗಳನ್ನು ಅಧ್ಯಯನ ಮಾಡುವವರಾರು?
7.'ಶ್ವಾಸ' ಯಾರದು?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ತುತ್ತೂರಿ-ತಮಟೆಗಳ ಧ್ವನಿ ಯಾವಾಗ ಇರುವುದಿಲ್ಲ?
2.ಯಾವ ತೆರನಾಗಿ ಎಲ್ಲರೊಳಗೊಂದಾಗಬೇಕು?
3.ಗರಡಿಯ ಪ್ರಯೋಜನಗಳೇನು?
4.ಧರ್ಮದ ದಾರಿದೀಪ ಯಾವುದು?
5.ಕೆಲಸ ಮತ್ತು ಪ್ರತಿಫಲಗಳ ವಿಚಾರದಲ್ಲಿ ಹೇಗಿರಬೇಕು?
6.'ಸಾಹಿತ್ಯ ಎಲ್ಲರದು' ಎಂಬುದನ್ನು ಹೇಗೆ ನಿರೂಪಿಸಲಾಗಿದೆ?

***ವಿವರವಾಗಿ ಉತ್ತರಿಸಿ:**

1.ಮಂಕುತಿಮ್ಮನ ಕಗ್ಗದಲ್ಲಿ ವ್ಯಕ್ತವಾಗುವ ಸಕರಾತ್ಮಕ ಧೋರಣೆಗಳನ್ನು ಸಂಗ್ರಹಿಸಿ ಬರೆಯಿರಿ.

2.ಆತ್ಮ ಕಲ್ಯಾಣ ಹಾಗೂ ಸಮಾಜ ಕಲ್ಯಾಣಗಳನ್ನು ಸಾಧಿಸಲು ಕವಿ ಸೂಚಿಸಿರುವ ಮಾರ್ಗವನ್ನು ಪಠ್ಯದ ಹಿನ್ನಲೆಯಲ್ಲಿ ಚರ್ಚಿಸಿ.

3.ಪಠ್ಯದಲ್ಲಿ ವ್ಯಕ್ತವಾಗಿರುವ ಲೋಕನೀತಿಯನ್ನು ಉದಾಹರಣೆಯೊಂದಿಗೆ ವಿವರಿಸಿ.

***ಭಾಷಾಭ್ಯಾಸ**

**1. ತತ್ಸಮ-ತದ್ಭವಗಳನ್ನು ಬರೆಯಿರಿ:**

ಚಂದ್ರ, ವಿಧಿ, ಪುಸ್ತಕ, ಧರುಮ, ಹಸಾದ, ಕಬ್ಬ, ಸಕ್ಕರೆ, ಬೊಮ್ಮ

**2. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ಇಳೆ, ಸೂರ್ಯ, ಚಂದ್ರ, ಕಾಳಗ

**3. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಒಗೆ, ನವ, ಪಾಲು, ಪರ, ಫಲ, ದೊರೆ

**4. ಇವುಗಳನ್ನು ಬಿಡಿಸಿ ಬರೆಯಿರಿ:**

ಮೊಳಕೆಯೊಗೆ, ಹುಲ್ಲಾಗು, ಫಲಮಾಗುವಂದು, ಹೆಬ್ಬದುಕು, ಒಬ್ಬನೂಟ, ಪಾಲೊಳು, ಮಲ್ಲಿಗೆಯಾಗು, ತಮಟೆಗಳಿಲ್ಲ, ಎಲ್ಲರೊಳಗೊಂದಾಗು.

*******

# ರೈಲ್ವೇ ನಿಲ್ದಾಣದಲ್ಲಿ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಏನನ್ನೋ ಮರೆತಂತಿದೆ?
2.ಬಿಸಿನೀರಿದೆಯಾ ಮೀನಾ, ಮಗುವಿನ ಹಾಲಿನ ಪುಡಿಗೆ?
3.ಮೈ ಬಿಸಿಯಾಗಿದೆಯಲ್ಲೆ, ಹೊರಡುವ ಸಮಯಕ್ಕೆ.
4.ನಡುಗುತ್ತಿದೆ ಬಂಡಿಯ ಮೈ ದೀಪದ ಬೆದರಿಕೆಗೆ.
5.ಇಲ್ಲಿಂದಲೇ ಕೈಮುಗಿಯುವನಲ್ಲಿಂದಲೇ ಹರಸು.
6.ಕಿಟಕಿಯ ಮುಚ್ಚಿದೆನಮ್ಮ ಕಿಡಿ ಬೀಳದ ಹಾಗೆ.
7.ಕಿಡಿಗಳು ಹೊರಳುವ ಹೊಗೆಯಲಿ ಹೆಗ್ಗಾಲಿಗಳುರುಳು.

***ಬಹು ಆಯ್ಕೆಯ ಪ್ರಶ್ನೆಗಳು:**

1.ತಾಯಿ ಮಗುವಿನ ಹಣೆಗೆ ಇಡಲು ಬಯಸಿದ್ದು_____
ಅ)ಕಪ್ಪು ಆ)ಕುಂಕುಮ ಇ)ಭಸ್ಮ ಈ) ಮುಲಾಮು
2.ಬಂಡಿಯ ಮೈ ನಡುಗಿದ್ದು_____
ಅ)ಜನದಟ್ಟಣೆಯಿಂದ ಆ)ದೀಪದ ಬೆದರಿಕೆಗೆ ಇ)ಜನರ ಬೊಬ್ಬೆಗೆ ಈ)ಬಂಡಿ ಹಾಳಾಗಿದ್ದಕೆ
3.ಕಿಡಿಗಳು ಹೊರಳುವ ಹೊಗೆಯಲ್ಲಿ ಕಂಡಿದ್ದು _____
ಅ)ಹೆಗ್ಗಾಲಿಗಳುರುಳು ಆ)ಬಣ್ಣದ ಚಕ್ರಗಳು ಇ)ತಿರುಗುವ ಬಂಡಿಗಳು ಈ)ಹಾರುವ ಕಲ್ಲುಗಳು

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಎಲ್ಲಿದ್ದೀಯೇ ಎಂದು ಯಾರು ಯಾರನ್ನು ಕೇಳಿದರು?
2.'ನಾನಿರುವುದೇ ಹಾಗೆ' ಎಂದುತ್ತರಿಸಿದವರು ಯಾರು?
3.ತಾಯಿ ಮಗವಿನ ಹಣೆಗೆ ಏನಿಡುವೆನೆಂದಳು?
4.ಬಂಡಿಯ ಮೈ ನಡುಗಿದ್ದೇಕೆ?
5.ಕಿಟಕಿಯ ಜತೆಗೂ ಬರುವುದು ಬೇಡವೆಂದು ಮಗಳು ಹೇಳಿದ್ದು ಯಾರಿಗೆ?
6.ಎಂಜಿನ್ನಿನ ಕೂಗು ಹೇಗೆ ಕೇಳಿಸಿತು?
7.ಕಿಟಕಿ ಮುಚಿಕೊಳ್ಳಲು ತಾಯಿ ಹೇಳಿದ್ದೇಕೆ?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಬಿಸಿನೀರಿದೆಯೇ ಎಂಬ ತಾಯಿಯ ಪ್ರಶ್ನೆಗೆ ಮಗಳ ಉತ್ತರವೇನು?
2.ಬಂಡಿಯ ಮೈ ನಡುಗಲು ಕಾರಣವೇನು?
3.ಕಿಟಕಿಯ ಜತೆಗೆ ಬರುವುದು ಎಂದರರ್ಥವೇನು?
4.ಮೀನಾ ಯಾವುದೆಲ್ಲಾ ವಸ್ತ್ರಗಳನ್ನು ಇಟ್ಟುಕೊಂಡಿದ್ದಾಳೆ.
5.ಮಗಳ ಯೋಚನೆ ಯಾವ ರೀತಿಯದ್ದು?
6.ರೈಲು ಹೊರಟ ಬಗೆ ಹೇಗೆ?

***ವಿವರವಾಗಿ ಉತ್ತರಿಸಿ:**

1.ತಾಯಿಯ ಆತಂಕ, ವೇದನೆ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?
2.ಮಗಳು ತಾಯಿಗೆ ಕೊಡುವ ಉತ್ತರದ ಸ್ವಾರಸ್ಯವೇನು?
3.ತಾಯಿ-ಮಗಳ ಅಂತ:ಕರಣ ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ?

***ಭಾಷಾಭ್ಯಾಸ**

**1. ಇವುಗಳನ್ನು ಬಿಡಿಸಿ ಬರೆಯಿರಿ:**

ಹೆಗ್ಗಾಲಿಗಳುರುಳು, ಕಂಬಿಗಳುದ್ದಕ್ಕು, ಬೀಳುವುದೊಳಗೆ, ಬೇಕಾದಷ್ಟಿದೆಯಮ್ಮ.

**2. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ನೆನೆ, ಹಿಡಿ, ಬೇಡ, ಮರೆ, ಕಪ್ಪು, ಸಮಯ

**3. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ಕಣ್ಣು, ನೀರು, ಬಾವುಟ

# ಗಜಲ್

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಜಿಗಿದು ಹೋದವು ತಾರೆ ಎಂದೋ ನೀಲಾಂಬರ ಅಂಗಳಕೆ.

2.ಅಗೆದು ತೆಗೆಯಿರಿ ಚಿಮ್ಮಿ ಹಂಚಿರಿ ವಿಶ್ವ ನವ ನಿರ್ಮಾಣಕೆ.

3.ಸಮತೆ ಬೇಕು ನ್ಯಾಯ ಬೇಕು ಇಳಿಯಬೇಕು ಉಗ್ರ ಹೋರಾಟಕೆ.

4.ಬಂಧಿಯಾಗಿವೆ ಕನಸು ನಮ್ಮವರ ಹಾಳು ಕೋಟೆಗಳಲ್ಲಿ.

5.ಹೊಸ ಕಾವ್ಯವ ಬರೆಯಬೇಕಿದೆ ಬದುಕು ಬಣ್ಣವೇರಲಿಕೆ.

6.ಉಗ್ರರೆ ಚದುರೆಗೆ ಮೈಮನ ಒಡ್ಡಿರಿ ಹೊಸ ಆಹ್ವಾನಕೆ.

***ಬಹು ಆಯ್ಕೆಯ ಪ್ರಶ್ನೆಗಳು:**

1.ತಾರೆಗಳು ಜಿಗಿದು ಹೋಗಿದ್ದು_____

ಅ)ನೀಲಾಂಬರದ ಅಂಗಳಕೆ ಆ)ಸಮುದ್ರಕ್ಕೆ ಇ)ಪರ್ವತಕ್ಕೆ ಈ) ಬಯಲಿಗೆ

2.ನಮ್ಮವರ ಕನಸು ಬಂಧಿಯಾಗಿದುದ್ದು_____

ಅ)ಸೆರೆಮನೆಯಲ್ಲಿ ಆ)ಆಕಾಶದಲ್ಲಿ ಇ)ಹಾಳು ಕೋಟೆಗಳಲ್ಲಿ ಈ)ಗುಹೆಗಳಲ್ಲಿ

3.ಹೊಸತು ಕಾವ್ಯವ ಬರೆಯಬೇಕಾದುದು_____

ಅ)ಬದುಕು ಬಣ್ಣವೇರಲಿಕೆ ಆ)ಮನರಂಜನೆಗೆ ಇ)ಪ್ರೀತಿ ಹಂಚಲು ಈ)ಕಷ್ಟವ ಕಳೆಯಲು

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ತಾರೆಗಳು ಎಲ್ಲಿ ಜಿಗಿದು ಹೋಗಿವೆ?

2.ವಿಶ್ವ ನವ ನಿರ್ಮಾಣಕೆ ಏನನ್ನು ಅಗೆದು ತೆಗೆಯಬೇಕು?

3.ಕನಸುಗಳು ಎಲ್ಲಿ ಬಂಧಿಯಾಗಿವೆ?

4.ಬದುಕು ಬಣ್ಣವೇರಲಿಕೆ ಏನು ಮಾಡಬೇಕು?

5.ಹೊಸ ಆಹ್ವಾನಕ್ಕೆ ಏನನ್ನು ಒಡ್ಡಬೇಕು?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಜೀವನ ಚಿಗುರೊಡೆದು ಬೆಳೆಯಲು ಏನು ಮಾಡಬೇಕು?

2.ಹೊಸ ಕಾವ್ಯವನ್ನು ಬರೆಯಬೇಕಾದುದು ಎಲ್ಲಿ? ಏಕೆ?

3.ತಾರೆಗಳು ಎಲ್ಲಿ ಹೋಗಿವೆ? ಅವುಗಳನ್ನು ಮರಳಿ ತಂದು ಏನು ಮಾಡಬೇಕು?

4.ವಿಶ್ವ ನವ ನಿರ್ಮಾಣಕೆ ಏನು ಮಾಡಬೇಕು?

5.ಉಗ್ರ ಹೋರಾಟ ಯಾಕೆ ಮಾಡಬೇಕು?

***ವಿವರವಾಗಿ ಉತ್ತರಿಸಿ:**

1.ವಿಶ್ವದ ನವ ನಿರ್ಮಾಣಕ್ಕಾಗಿ ನಾವು ಮಾಡಬೇಕಾಗಿರುವುದೇನು?

2.ಹೊಸ ಆಹ್ವಾನಕ್ಕೆ ಒಡ್ಡಿಕೊಳ್ಳಲು ಕವಿ ಹೇಗೆ ನಮ್ಮನ್ನು ಪ್ರೇರೇಪಿಸುತ್ತಾನೆ?

3.ಗಜಲ್‌ನಲ್ಲಿ ವ್ಯಕ್ತವಾದ ಸಕರಾತ್ಮಕ ಧೋರಣೆಯನ್ನು ಸಂಗ್ರಹಿಸಿ ಬರೆಯಿರಿ.

***ಭಾಷಾಭ್ಯಾಸ**

**1. ಇವುಗಳನ್ನು ಬಿಡಿಸಿ ಬರೆಯಿರಿ:**

ನೀಲಾಂಬರ, ಚಿಗುರೊಡೆದು, ಬಣ್ಣವೇರಲಿಕೆ, ಭೂಮಿಯಿಹುದು

**2. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಅಂಬರ, ಅಗೆ, ಒಡ್ಡು, ತೆರೆ, ನಿಧಾನ, ಮರೆ, ನವ,

**3.ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ತಾರೆ, ಅಂಬರ, ನೆಲ, ಭೂಮಿ, ಜೀವನ

**4.ತತ್ಸಮ –ತದ್ಭವಗಳನ್ನು ಬರೆಯಿರಿ:**

ಬಣ್ಣ, ಮೀರ, ಮುಕ್ತ

**5.ವಾಕ್ಯದಲ್ಲಿ ಪ್ರಯೋಗಿಸಿ:**

ಬಣ್ಣವೇರು, ಹೊಟ್ಟೆಸುಡು, ಮೈಯೊಡ್ಡು, ಚಿಗುರೊಡೆ

# ಇಲ್ಲ ಭಾರತ ಬರಿಯ ಕನಸಿನಲ್ಲಿ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಸತ್ಯ, ಪ್ರಾಮಾಣಿಕತೆ ಬೋಧಿಸುವಿರಾ?
2.ಸಾಗಿರುವ ನಿಮ್ಮನ್ನೆ ಶೋಧಿಸುವಿರಾ?
3.ಸ್ವಾರ್ಥ, ಸಂಕೋಚಗಳ ಮರೆತ್ತಿಲ್ಲವೆ?
4.ಇಲ್ಲ ಭಾರತ ಬರಿಯ ಕನಸಿನಲ್ಲಿ.
5.ಜನತೆ ನಂಬುವುದೆಂದು ಭಾವಿಸಿದಿರಾ?
6.ಅಧಿಕಾರದಾಮಿಷದಿ ಕಂಡವರ ವಂದಿಸುತ.
7.ಉಪದೇಶ ಉಪವಾಸ ನಾಡ ಕಟ್ಟುವುದಿಲ್ಲ.
8.ಸಹನೆ ಸಂತೋಷಗಳೆ ಆಗ ಲಭಿಸುವ ಚಿನ್ನ.

***ಬಹು ಆಯ್ಕೆಯ ಪ್ರಶ್ನೆಗಳು:**

1.ಸುತ್ತಲೂ ಬೆಳೆದಿರುವುದು ___
ಅ)ಗಿಡ-ಗಂಟಿಗಳು ಆ) ಮುಳ್ಳು-ಮೋಸಗಳು ಇ)ಪೊದೆಗಳು ಈ)ಅರಣ್ಯಗಳು

2.ಕಂಡವರ ವಂದಿಸುವುದು____
ಅ)ಅಧಿಕಾರದಾಮಿಷಕ್ಕೆ ಆ) ಗೌರವಕ್ಕೆ ಇ)ಸೌಹಾರ್ದತೆಗೆ ಈ)ಮೋಸಕ್ಕೆ

3.ಎದೆಯ ತಟ್ಟದೇ ಇರುವುದು____
ಅ)ವಂಚನೆ ಆ)ಪ್ರೀತಿಯಿಲ್ಲದ ನಡತೆ ಇ)ವ್ಯವಹಾರ ಈ)ಆರ್ತನಾದ

4.ಜೀವನ ಚಿನ್ನವಾಗಲು ಬೇಕಾಗಿರುವುದು ____
ಅ)ಸಹನೆ ಸಂತೋಷ ಆ) ಹಣಕಾಸು ಇ)ಆಸ್ತಿ ಪಾಸ್ತಿ ಈ)ಅಧಿಕಾರ

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಸುತ್ತಲೂ ಏನು ಬೆಳೆದಿದೆ?
2.ಯಾವುದು ನಾಡನ್ನು ಕಟ್ಟುವುದಿಲ್ಲ?
3.ಎದೆಯನ್ನು ಯಾವುದು ತಟ್ಟುವುದಿಲ್ಲ?
4.ಪ್ರಗತಿಯ ಅನ್ನ ಯಾವುದು?
5.ಜೀವನ ಚಿನ್ನವಾಗುವುದು ಹೇಗೆ?
6.ಸಂಜೆ ಮತ್ತು ಮುಂಜಾವುಗಳನ್ನು ಹೇಗೆ ಕಳೆದಿದ್ದೇವೆ?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಜನತೆ ಯಾವುದನ್ನು ನಂಬುವುದಿಲ್ಲ?
2.ನಿಜದ ಮಾತು ಯಾವುದು?
3.ಅನ್ನ ಮತ್ತು ಚಿನ್ನ ಯಾವುದು?
4.ನಮ್ಮ ವ್ಯವಹಾರದ ಮನಸ್ಸಿನಲ್ಲಿ ಏನೇನು ಇರಬೇಕು?
5.ಯಾವುದು ಸರಿಯಾದ ನಡೆ ಅಲ್ಲಾ ಎಂದು ಕವಿ ಹೇಳುತ್ತಾರೆ?
6.ನಮ್ಮ ಶೋಧನೆ ಹೇಗಿರಬೇಕು?

***ವಿವರವಾಗಿ ಉತ್ತರಿಸಿ:**

1.ಭವ್ಯ ಭಾರತದ ಕನಸು ನನಸಾಗುವುದು ಹೇಗೆ?
2.ಬಲಿಷ್ಠ ರಾಷ್ಟ್ರವನ್ನು ಕಟ್ಟಬೇಕಾದರೆ ನಾವು ಏನು ಮಾಡಬೇಕು?

***ಭಾಷಾಭ್ಯಾಸ**

**1. ಇವುಗಳನ್ನು ಬಿಡಿಸಿ ಬರೆಯಿರಿ:**

ಮೇಷದಾವೇಶ, ಅಧಿಕಾರದಾಮಿಷ, ಆಯುಷ್ಯದಂಚು, ಹಸಿರಾಗುವುದು, ಪಾತಗಳನಾಚೆ, ಪ್ರೀತಿಯಿಲ್ಲದ

**2. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ಮಾತು, ದುಡಿಮೆ, ಪ್ರಕೃತಿ, ಚಿನ್ನ, ಸಂತೋಷ, ಪ್ರೀತಿ, ಅನ್ನ

**3. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಮರೆ, ಕಳೆ, ಕಲಿ, ಉಸಿರು, ಅರಿ

**4.ತತ್ಸಮ –ತದ್ಭವಗಳನ್ನು ಬರೆಯಿರಿ:**

ಸಂಜೆ, ಆಯುಷ್ಯ, ಪ್ರೀತಿ, ಸಂತೋಷ

# ನನ್ನ ಚಪ್ಪಲಿಗೆ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಬಡ ಮೋಚಿಯಾ ಜೋಡಿ ಮಕ್ಕಳೇ.
2.ಸಿಂಹಾಸನದ ಮೇಲೆ ಕೂತ ಮೌನ ಕೂಸುಗಳೆ !
3.ನೀವು ಬೀದಿಗೆ ಬಿದ್ದರೆ, ನಾವೇ ಇರುವುದಿಲ್ಲ.
4.ನೆಲನೆಕ್ಕಿ ಬದುಕಿದ ನಿಮ್ಮ ರೀತಿಗೆ ಪ್ರೀತಿಯ ಅಭಿನಂದನೆಗಳು.
5.ನೆಲಮಣೆಯ ಮೇಲೆ ನಿಂತ ನನ್ನ ಮೌನ ಸಂಗಾತಿಗಳೆ.
6.ನನ್ನ ಕಾಲು ಮರಿಗಳೆ ನಿಮಗೆ ನಾನು ಸರಿಯೆ!

***ಬಹು ಆಯ್ಕೆಯ ಪ್ರಶ್ನೆಗಳು:**

1.ನೆಲನೆಕ್ಕಿ ಬದುಕಿದುದು_____

ಅ)ಬಡವರು ಆ)ಚಪ್ಪಲಿಗಳು ಇ)ರೈತರು ಈ)ಶ್ರಮಿಕರು

2.ನೆಲಮನೆಯ ಮೇಲೆ ನಿಂತ ಮೌನ ಸಂಗಾತಿಗಳು _____

ಅ)ಚಪ್ಪಲಿಗಳು ಆ)ಗೆಳೆಯರು ಇ)ಪರದೇಶಿಯರು ಈ)ಬಡವರು

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಕವಿ ಚಪ್ಪಲಿಗೆ ಏನನ್ನು ಸಲ್ಲಿಸುತ್ತಾರೆ?
2.ನೆಲನೆಕ್ಕಿ ಬದುಕಿದುದು ಯಾವುದು?
3.ಕವಿ ಚಪ್ಪಲಿಯನ್ನು ಯಾರ ಮಕ್ಕಳೆಂದು ಕರೆದಿದ್ದಾರೆ?
4.ಕವಿ ಯಾರಿಗೆ ಪ್ರಣಾಮ ಸಲ್ಲಿಸುತ್ತಾರೆ?
5.ಚಪ್ಪಲಿಯನ್ನು ತಲೆ ಮೇಲೆ ಹೊತ್ತವರು ಯಾರು?
6.ಮಾನಗೇಡಿಗಳು ಯಾವುದನ್ನು ಅವಮಾನ ಎಂಬರು?
7.ಮೌನ ತಪಸ್ವಿಗಳು ಯಾರು?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಚಪ್ಪಲಿಗಳು ಕಾಣದಿರುವುದು ಕೇಳದಿರುವುದು ಯಾವುದು?
2.ಕವಿ ಯಾರನ್ನು ಮೌನ ಸಂಗಾತಿಗಳು ಎಂದು ಕರೆದಿದ್ದಾರೆ? ಏಕೆ?
3.ಚಪ್ಪಲಿ ತುಳಿಯುವ ದಾರಿ ಯಾವುದು?
4.ಮಾನಗೇಡಿಗಳು ಎಂದರೆ ಯಾರು?
5.ಕವಿ ಜನುಮ ಜನುಮದ ನಮನಗಳನ್ನು ಯಾಕೆ ಸಲ್ಲಿಸುತ್ತಾರೆ?
6.ಕವಿ ತಲೆಬಾಗಿ ನಮಿಸಲು ಕಾರಣವೇನು?

***ವಿವರವಾಗಿ ಉತ್ತರಿಸಿ:**

1.ನನ್ನ ಚಪ್ಪಲಿಗೆ ಕವನದಲ್ಲಿ ಸಾಂಕೇತಿಕವಾಗಿ ವ್ಯಕ್ತವಾದ ತುಳಿತಕ್ಕೊಳಗಾದವರ ಸ್ಥಿತಿ–ಗತಿಗಳನ್ನು ವಿಶ್ಲೇಷಿಸಿರಿ.
2.ಚಪ್ಪಲಿ ಪ್ರತಿಮೆಯ ಮೂಲಕ ಮೂಡಿ ಬಂದಿರುವ ಬಂಡಾಯ ಸಂವೇದನೆಯನ್ನು ಚಿತ್ರಿಸಿ.

***ಭಾಷಾಭ್ಯಾಸ**

**1. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ಕಣ್ಣು, ತಲೆ, ಜನುಮ, ಹಾದಿ, ಕಾಡು, ಕುಮಾರ

**2. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಗುಡಿ, ಮರಿ, ಕಾಲು, ಸರಿ, ಹೊತ್ತು, ಸಾವಿರದ

**3. ತತ್ಸಮ –ತದ್ಭವಗಳನ್ನು ಬರೆಯಿರಿ:**

ಸಾವಿರ, ಜನುಮ, ಕುಮಾರ, ಬೀದಿ

**4. ವಾಕ್ಯದಲ್ಲಿ ಬಳಸಿ:**

ಬೆನ್ನಟ್ಟು, ನಮಸ್ಕರಿಸು, ಕಾರುಬಾರು, ಸಾವಿರದ ಶರಣು, ತಲೆಬಾಗು

# ಅವಳ ಚರಿತ್ರೆ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಇರಲಿ ಬಿಡಿ ಅವಳದೇ ಮುದ್ರೆ.
2.ಯುಗ ಯುಗಗಳಿಂದ ಅವಳು ಸಂಗಾತಿ.
3.ಬುದ್ಧಿ ಭಾವಗಳೆಲ್ಲವೂ ಅವಳವೇ ಆಗಿರಲಿ.
4.ಕಾಣುತ್ತಿದೆ ನಿಮ್ಮದೇ ಕ್ರೂರ ಮುದ್ರೆ.
5.ರಚಿಸಲಿ ಬಿಡಿ ಅವಳದೇ ಇತಿಹಾಸ.

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಪ್ರೀತಿಯಿಂದ ಕಟ್ಟಿದುದು ಯಾವುದು?
2.ನಾಗರಿಕತೆಗಳನ್ನು ಕಟ್ಟುವವರು ಯಾರೆಂದು ಕವಿಯತ್ರಿ ಹೇಳುತ್ತಾರೆ?
3.ಹೊಸ ಸೂರ್ಯೋದಯವನ್ನು ಯಾರು ತೋರಿಸಬೇಕು?
4.ಮಹಿಳೆ ಏನನ್ನು ರಚಿಸಬೇಕಾಗಿದೆ?
5.ಜೊತೆಗಾತಿ ಎಂದಿನಿಂದ ಸಂಗಾತಿಯಾಗಿದ್ದಾಳೆ?

***ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಕ್ರೂರ ಮುದ್ರೆ ಎಲ್ಲೆಲ್ಲಿ ಕಾಣುತ್ತಿದೆ?
2.ಹೊಸ ಚರಿತ್ರೆ ರಚಿಸಲು ಯಾವ ಅಂಶಗಳು ಬೇಕು?
3.ಅವಳದೇ ಚರಿತ್ರೆ ರಚಿಸುವುದರಿಂದ ಏನಾಗಬಹುದು?

***ವಿವರವಾಗಿ ಉತ್ತರಿಸಿ:**

1.ಚರಿತ್ರೆಯಲ್ಲಿ ದಾಖಲಾಗಲು ಹಂಬಲಿಸುವ ಮಹಿಳೆಯ ಬಯಕೆಗಳು ಯಾವುದು?
2.ಮಹಿಳೆಯ ಮೇಲಿನ ಪುರುಷರ ಯಜಮಾನಿಕೆ ಪ್ರವೃತ್ತಿಯನ್ನು ಕವಯತ್ರಿ ಹೇಗೆ ನಿರೂಪಿಸಿದ್ದಾರೆ ? ಚಿತ್ರಿಸಿ.

***ಭಾಷಾಭ್ಯಾಸ**

**1.ತತ್ಸಮ –ತದ್ಭವಗಳನ್ನು ಬರೆಯಿರಿ:**

ಯುಗ, ಪ್ರೀತಿ

**2.ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಸಾಕು, ಮುದ್ರೆ, ಭಾವ, ಬಿಡಿ

**3.ಇವುಗಳನ್ನು ಬಿಡಿಸಿ ಬರೆಯಿರಿ:**

ಸೂರ್ಯೋದಯ, ಅವಳಿಲ್ಲದ, ಪೂರ್ಣವಾಗು, ಪ್ರೀತಿಯಿಂದ

*******

## ಕಾಗದದ ದೋಣಿಯಲ್ಲಿ

*** ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ:**

1.ಹಿಂಡಿ ಹಿಪ್ಪೇ ಮಾಡಿ ಹರವಿ ಹಾಕಿದ್ದೇನೆ.
2.ನರಳಿದ್ದೇಗೆ ಕತ್ತಲೆ ಕರಗುವಂತೆ.
3.ಕಣ್ಣು ಮನಸು ಮಲ್ಲಿಗೆಯಾಗಲಿ.
4.ನೆತ್ತಿಯ ನೀರು ಗಂಟಲಲ್ಲಿಳಿದು ನರಳಿದ್ದೇನೆ.
5.ಹುಯ್ಯುತ್ತಲೆ ಇರುವ ಮಳೆಯನ್ನು ನೋಡುತ್ತಲೇ ಇದ್ದೇನೆ.
6.ಯಾರಿಗೂ ಕೇಳದಂತಾಗಿ ಮರೆತು ಹೋಗಿದ್ದೇನೆ.
7.ತೇಲಿ ತೀರ ಸೇರಿದ್ದರೆ ವಂದಿಸುವೆ ಮಹಾನದಿಗೆ.
8.ತೋರಿಸುವೆ ಆಕಾಶ ತುಂಬಿರುವ ನಕ್ಷತ್ರಗಳನ್ನು.

***ಬಹು ಆಯ್ಕೆಯ ಪ್ರಶ್ನೆಗಳು:**

1.ಹಿಡಿಯಲು ಹೋಗಿ ಕೈಗೆ ಸಿಗದೇ ಇದ್ದದು_____
ಅ)ಮಳೆ ಆ)ಆಕಾಶ ಇ)ಪ್ರಾಣಿ ಈ)ಪಕ್ಷಿ
2.ಬೇಲಿಯ ಮೇಲೆ ಹಾಕಿರುವುದು_____
ಅ)ನೆಂದ ಬಟ್ಟೆಗಳು ಆ)ಚಪ್ಪಲಿಗಳು ಇ)ಮುಳ್ಳುಗಳು ಈ)ಆಟಿಕೆಗಳು
3.ದಡ ಸೇರಿರುವುದು_____
ಅ)ಮನುಜರು ಆ)ಹರಿಯ ಬಿಟ್ಟ ದೋಣಿಗಳು ಇ)ಕಟ್ಟೆಗಳು ಈ) ಪ್ರಾಣಿಗಳು

***ಒಂದು ವಾಕ್ಯದಲ್ಲಿ ಉತ್ತರಿಸಿ:**

1.ಮುತ್ತಿನ ಸರ ಇಳಿಬಿಟ್ಟಂತೆ ಸುರಿಯುವುದು ಯಾವುದು?
2.ಕವಿ ಬೇಲಿಯ ಮೇಲೆ ಏನನ್ನು ಹರವಿ ಹಾಕಿದ್ದಾನೆ?
3.ಹರಿಯ ಬಿಟ್ಟ ದೋಣಿಗಳು ಏನಾಗಿವೆ?
4.ಮಹಾಪೂರದಲ್ಲಿ ಕವಿ ಏನನ್ನು ನಡೆಸುವೆ ಎನ್ನುತ್ತಾರೆ?
5.ಯಾರ ಕೈ. ಕಣ್ಣು, ಮನಸ್ಸು ಮಲ್ಲಿಗೆ ಯಾಗಬೇಕು?

***ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1.ಕವಿ ಉಡುಗಿ ಹೋಗಲು ಕಾರಣವೇನು?
2.ಮಹಾನದಿಗೆ ವಂದಿಸಲು ಕಾರಣವೇನು?
3.ಕವಿ ಮರೆತು ಹೋಗಿರುವ ವಿಷಯಗಳಾವುವು?
4.ಕವಿ ಎಂತಹ ಮಳೆ ಸುರಿಯಲಿ ಎನ್ನುತ್ತಾರೆ?

***ವಿವರವಾಗಿ ಉತ್ತರಿಸಿ:**

1.ಮಳೆ ನಿರಂತರ ಹುಯ್ಯಲಿ ಎಂದು ಕವಿ ಹೇಳಲು ಕಾರಣವೇನು?
2.ದಲಿತರ ಬದುಕಿನ ಬವಣೆಯನ್ನು ಮಳೆ ಪ್ರತಿಮೆಯ ಮೂಲಕ ಹೇಗೆ ಚಿತ್ರಿಸಲಾಗಿದೆ?

***ಭಾಷಾಭ್ಯಾಸ**

**1. ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ:**

ಹೊಳೆ, ಅಲೆ, ಬಟ್ಟೆ, ಹರಿ, ನೆನೆ, ನೆರೆ, ಸೇರು, ಮುತ್ತು

**2. ಇವುಗಳಿಗೆ ಸಮನಾರ್ಥ ಪದಗಳನ್ನು ಬರೆಯಿರಿ:**

ನೀರು, ಮಳೆ, ನಾಯಿ, ಬಟ್ಟೆ, ಕಣ್ಣು, ನಕ್ಷತ್ರ, ನೆನೆ

**3. ತತ್ಸಮ –ತದ್ಭವಗಳನ್ನು ಬರೆಯಿರಿ:**

ಆಕಾಶ, ಸುಖ

## ಪಾಠ–1

## <u>ನಾಲ್ವರ್ ಧೂರ್ತರ್ ಒರ್ವ ಬ್ರಾಹ್ಮಣನಂ ವಂಚಿಸಿದ ಕಥೆ</u>

<u>ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ</u> : –

1) ನಾಯಂ ಮಾಡಿ ತಿಂಬಂ ಬನ್ನಿಂ
2) ನೀನಪ್ಪೊಡೆ ದೂರ್ವಾಸನ ಸಮಾನನಪ್ಪ ಬ್ರಾಹ್ಮಣಂ
3) ದುಷ್ಟಂಗೆ ಮಱುಮಾತುಗೊಟ್ಟೊಡೇನಪ್ಪುದು ?
4) ಮರುಳಿಕ್ಕಿ ಅಟ್ಟುದನುಂಡಿರೋ ಪೇಳಿಮ್
5) ನಾಯಲ್ಲಿದು ಭೂಭುವನ ಪ್ರಸಿದ್ಧಮಜಂ
6) ಶ್ವಾನನಂ ಪೊತ್ತು ಹೀನಜಾತಿ ಸಮಾನನಾದೆ
7) ಪ್ರಾಯಶ್ಚಿತ್ತಮಂ ಕೈಕೊಳ್ಳಿಮ್

<u>ಬಹು ಆಯ್ಕೆಯ ಪ್ರಶ್ನೆಗಳು</u> : –

1) ಬ್ರಾಹ್ಮಣನನ್ನು ವಂಚಿಸಿದ ಧೂರ್ತರ ಸಂಖ್ಯೆ.
   ಅ) ಎರಡು ಆ) ಮೂರು ಇ) ನಾಲ್ಕು ಈ) ಐದು
2) ದೂರ್ವಾಸ ಮುನಿಗೆ ಸಮಾನವಾಗಿರುವವನು
   ಅ) ಬ್ರಾಹ್ಮಣ ಆ) ಧೂರ್ತ ಇ) ಲೇಖಕ ಈ) ಕೋಪಿಷ್ಟ
3) ಧೂರ್ತರು ಕೊನೆಯಲ್ಲಿ ಆಡನ್ನು ಹೀಗೆ ಮಾಡಿದರು
   ಅ) ಮಾರಿದರು ಆ) ಬಿಸಾಡಿದರು ಇ) ಕೊಂದು ತಿಂದರು ಈ) ಸಾಕಿದರು

<u>ಒಂದು ವಾಕ್ಯದಲ್ಲಿ ಉತ್ತರಿಸಿ</u> : –

1) ಶ್ರೋತ್ರಿಯನೆಂದರೆ ಯಾರು ?
2) ಪಾರ್ವನು ಯಾವ ಕಾರಣಕ್ಕಾಗಿ ಆಡನ್ನು ಖರೀದಿಸಿದ್ದನು ?
3) ಪಾರ್ವನು ಆಡನ್ನು ಹೇಗೆ ಕೊಂಡೊಯ್ಯುತ್ತಿದ್ದನು ?
4) ಆನೆತ್ತಾನುಂ ಮರುಳ್ಗೊಂಡೆನಕ್ಕುಂ ಎಂದುಕೊಂಡವರು ಯಾರು ?
5) ಭಯಗೊಂಡ ಬ್ರಾಹ್ಮಣನು ಕಡೆಗೆ ಏನು ಮಾಡಿದನು ?

<u>ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ</u> : –

1) ಪಾರ್ವನನ್ನು ನೋಡಿ ಧೂರ್ತರು ಏನೆಂದುಕೊಂಡರು ?
2) ಮೊದಲ ಧೂರ್ತನ ಮಾತಿಗೆ ಬ್ರಾಹ್ಮಣನು ಹೇಗೆ ಪ್ರತಿಕ್ರಿಯಿಸಿದನು ?
3) ಭ್ರಮೆ ಮೂಡಿದೊಡನೆ ಬ್ರಾಹ್ಮಣನು ಏನು ಮಾಡಿದನು ?
4) ಬ್ರಾಹ್ಮಣ್ಯದ ಚಿಹ್ನೆಗಳಾವುವು ?
5) ಹೀನ ಜಾತಿ ಸಮಾನನಾದ ಬ್ರಾಹ್ಮಣನನ್ನು ಮಹಾಜನಗಳು ಏನು ಮಾಡುತ್ತಾರೆ ?
6) ನೋಡಿದವರೆಲ್ಲರೂ ಇದು ನಾಯಿ ಎಂದಾಗ ಬ್ರಾಹ್ಮಣನು ಇದು ಯಾವ ರೂಪದಿಂದ ಕೂಡಿರಬಹುದು ಎಂದು ಆಲೋಚನೆ ಮಾಡಿದನು ?

<u>ವಿವರವಾಗಿ ಉತ್ತರಿಸಿ</u> :-

1) ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.
2) ವಂಚಕರ ಸಂಚಿಗೆ ಹಂತ-ಹಂತವಾಗಿ ಮರುಳಾಗುವ ಬ್ರಾಹ್ಮಣನ ಮನಃಸ್ಥಿತಿಯನ್ನು ಕತೆಯ ಹಿನ್ನೆಯಲ್ಲಿ ಚರ್ಚಿಸಿ.

<u>ಭಾಷಾಭ್ಯಾಸ</u> : -

1) ಹಳಗನ್ನಡ ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿ :

| | | |
|---|---|---|
| ಪ್ರಥಮ ವಿಭಕ್ತಿ ಪ್ರತ್ಯಯ | ಮ್/ನ್ | ಪಾರ್ವಂ/ಪಾರ್ವನ್ |
| ದ್ವಿತೀಯಾ ವಿಭಕ್ತಿ ಪ್ರತ್ಯಯ | ಅಂ | ಪಾರ್ವನಂ |
| ತೃತೀಯಾ ವಿಭಕ್ತಿ ಪ್ರತ್ಯಯ | ಇಂ | ಪಾರ್ವನಿಂ |
| ಚತುರ್ಥೀ ವಿಭಕ್ತಿ ಪ್ರತ್ಯಯ | ಗೆ | ಪಾರ್ವಂಗೆ |
| ಪಂಚಮೀ ವಿಭಕ್ತಿ ಪ್ರತ್ಯಯ | ಅತ್ತಣಿಂ | ಪಾರ್ವನತ್ತಣಿಂ |
| ಷಷ್ಠೀ ವಿಭಕ್ತಿ ಪ್ರತ್ಯಯ | ಅ | ಪಾರ್ವನ |
| ಸಪ್ತಮೀ ವಿಭಕ್ತಿ ಪ್ರತ್ಯಯ | ಒಳ್ | ಪಾರ್ವನೊಳ್ |

2) ಇವುಗಳನ್ನು ಬಿಡಿಸಿ ಬರೆಯಿರಿ : -
ಬೇಜೂರು, ಮಾರ್ಬಟ್ಟೆ, ಪೆಗಲೊಳಿರ್ದ, ಮುಟ್ಟಲಾಗದು, ಅಟ್ಟುದನುಣ್

3) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ : -
ಅಜ, ಪೊತ್ತು, ಆಡು, ಕುಶ, ಬಟ್ಟೆ, ಸಮಯ

4) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ : -
ಚೋದ್ಯ, ಭುವನ, ಭಯ, ಪಾರ್ವ, ನಾಯಿ, ಚಿಹ್ನೆ

5) ಹಳಗನ್ನಡ 'ಪ' ಕಾರವು ಹೊಸಗನ್ನಡದಲ್ಲಿ 'ಹ' ಕಾರವಾಗುವ ಧ್ವನಿ ವ್ಯತ್ಯಾಸವನ್ನು ಗಮನಿಸಿ : -
ಪೊತ್ತು - ಹೊತ್ತು, ಪಾರುವ - ಹಾರುವ, ಪೇಟಿಮ್ - ಹೇಳಿರಿ
ಪೆಗಲ್ - ಹೆಗಲು, ಪೋಪುದು - ಹೋಹುದು, ಪರಿದು - ಹರಿದು

6) ಕೆಳಗಿನ ಪಠ್ಯ ಭಾಗವನ್ನು ಹೊಸಗನ್ನಡದಲ್ಲಿ ಬರೆಯಿರಿ :-
ಅಂತು ನಡೆದ ಪಾರ್ವಂಗೆ ಮತ್ತೊರ್ವನಿದಿರು ಬಂದೆಲೆ ಪಾರ್ವ, ನಿಮಗೆ ಕುಶಾಕ್ಷಮಾಲಾಯಜ್ಞೋಪವೀತೋತ್ತರೀಯಾದಿ ಚಿಹ್ನೆಂಗಳೆತ್ತಲೀ ನಾಯಂ ಪೊತ್ತು ಪೋಪುದೆತ್ತಲೆತ್ತಾನುಂ ನಿಮಗೆ ಮೃಗಯಾವ್ಯಸನ ವ್ಯಾಪಾರಮಾದುದಕ್ಕಮಲ್ಲದಾಗಳಿದು ನಿಮ್ಮ ದುಷ್ಕರ್ಮದ ಫಲವೆಂದು ನುಡಿದು ಪೋಪುದುಂ.

# ಪಾಠ–2

## ರೋಮ್ ನಗರದಲ್ಲಿ

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : –

1) ಒಂದು ದಿನದ ರಚನೆಯಲ್ಲ ; ಯುಗಮಾನಗಳ ರಚನೆ
2) ತಮ್ಮ ಕಾಲದ ರೋಮನ್ನರ ಅಮಾನುಷತೆಯೇ ಜನರ ವಿನೋದಗಳಾಗಿದ್ದವು.
3) ಪೇಂತಿಯಾನ್ ಸುಸ್ಥಿತಿಯಲ್ಲಿರುವ ಒಂದು ಸುಂದರ ದೇವಾಲಯ
4) ಅದು ಮೇರಿಗೆ ಅರ್ಪಿತವಾಗಿದೆ.
5) ಅಲ್ಲಲ್ಲಿ ಶಿಲೆಯದೇ ಮಂಚಗಳಿವೆ.
6) ಜೋಡಣೆಯು ಅಷ್ಟು ಸೂಕ್ಷ್ಮ ; ಬಳಸಿದ ಬಣ್ಣಗಳು ಅಷ್ಟು ಉಜ್ವಲ
7) ಮೈಕೆಲ್ ಏಂಜಲೋವಿನ ದೈವತ್ವದರ್ಶನದ ಈ ಪ್ರತೀಕ ಪ್ರಪಂಚದಲ್ಲೇ ಸಾಟಿಯಿಲ್ಲದ್ದು.
8) ಇದು ಆಧುನಿಕ ಇಟಲಿಯಲ್ಲ ; ಇಂದಿಗೂ ಪ್ರಾಚೀನ ರೋಮ್

ಬಹು ಆಯ್ಕೆಯ ಪ್ರಶ್ನೆಗಳು : –

1) ಕೊಲೋಸಿಯಮ್ ಒಂದು –
   ಅ) ಮೈದಾನ  ಆ) ವಿಚಿತ್ರವಾದ ವಿನೋದ ಶಾಲೆ  ಇ) ಚರ್ಚು  ಈ) ನಗರ
2) ರೋಮನ್ ಕೆಥೋಲಿಕ್‌ರವರ ಪವಿತ್ರ ಸ್ಥಳ –
   ಅ) ಈಜಿಪ್ಟ್  ಆ) ಜರುಸಲೇಮ್  ಇ) ಇಟಲಿ  ಈ) ಫ್ರಾನ್ಸ್
3) ಕೊಲೋಸಿಯಮ್ ಅಂತಸ್ತುಗಳ ಸಂಖ್ಯೆ –
   ಅ) ಎರಡು  ಆ) ನಾಲ್ಕು  ಇ) ಮೂರು  ಈ) ಐದು
4) ಸಾಮ್ರಾಟ್ ಕಾನ್‌ಸ್ಟೆಂಟೈನ್ ಕಟ್ಟಿಸಿದ ಚರ್ಚು–
   ಅ) ಸೈಂಟ್ ಪೀಟರ್ಸ್ ಬೆಸಿಲಿಕಾ  ಆ) ಸೈಂಟ್ ಫಾಲ್ಸ್ ಬೆಸಿಲಿಕಾ
   ಇ) ಗಿವೋನಿ ಬೆಸಿಲಿಕಾ  ಈ) ಸೈಂಟ್ ಮಾಗಿಯೋರಿ ಬೆಸಿಲಿಕಾ

ಒಂದು ವಾಕ್ಯದಲ್ಲಿ ಉತ್ತರಿಸಿ : –

1) ಈಜಿಪ್ಟಿನಿಂದ ಪೂರ್ವಕ್ಕಿರುವ ರಾಷ್ಟ್ರಗಳಿಗೆಲ್ಲ ಸ್ಫೂರ್ತಿ ಕೊಟ್ಟ ನಗರ ಯಾವುದು ?
2) ರೋಮನ್ ಸಾಮ್ರಾಜ್ಯ ಎಲ್ಲಿಂದ ಎಲ್ಲಿ ತನಕ ತನ್ನ ಇತಿಹಾಸವನ್ನು ಚಾಚಿಕೊಂಡಿದೆ ?
3) ರೋಮನ್ ಕೆಥೋಲಿಕ್ ಕ್ರೈಸ್ತರ ಅತಿ ದೊಡ್ಡ ಯಾತ್ರಾ ಸ್ಥಳವನ್ನು ಹೆಸರಿಸಿ.
4) ರೋಮ್ ನಗರದ ಪ್ರಾಚೀನ ಮಂದಿರಗಳಲ್ಲಿ ಸುಸ್ಥಿತಿಯಲ್ಲಿರುವ ಸುಂದರ ದೇವಾಲಯ ಯಾವುದು ?
5) ಪೇಂತಿಯಾನ್ ದೇವಾಲಯದ ಸ್ತಂಭಗಳು, ಮಂಟಪಗಳು ಯಾವ ಶಿಲೆಗಳಿಂದ ರಚನೆಗೊಂಡಿವೆ ?
6) ವೀನಸ್ ದೇವತೆಯ ದೇವಾಲಯವನ್ನು ನಿರ್ಮಿಸಿದ ರೋಮ್ ಸಾಮ್ರಾಟ ಯಾರು ?
7) ರೋಮ್‌ನ ಆಧುನಿಕ ವಾಸ್ತುಶೈಲಿಗೆ ಒಂದು ಉದಾಹರಣೆ ಯಾವುದು ?
8) ದೊಡ್ಡ ಸಮುದ್ರದ ಅಲೆಯಂತೆ ಕಾಣಿಸುವುದು ಯಾವುದು ?
9) ಪ್ರಪಂಚದಲ್ಲೇ ಹಿರಿದಾದ ಚರ್ಚು ಯಾವುದು ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : –

1) ರೋಮ್ ನಗರವನ್ನು ಕುರಿತ ಎರಡು ಹಳೆಯ ಗಾದೆಗಳು ಯಾವುವು ?
2) ಪ್ರಾಚೀನ ರೋಮ್‌ನ ಸಭಾಂಗಣವನ್ನು ಕುರಿತ ಕಾರಂತರ ಅಭಿಪ್ರಾಯವೇನು ?
3) ಕಾನ್‌ಸ್ಟಂಟೈನ್ ದೊರೆಯ ವಿಶೇಷತೆ ಏನು ?
4) ರೋಮ್‌ನ ಪೂರ್ವ ಕಥಾನಕಗಳು ನಮಗೆ ಹೇಗೆ ತಿಳಿದು ಬರುತ್ತವೆ ?
5) ರೋಮ್‌ನಲ್ಲಿ ನೋಡಲೇಬೇಕಾದ ಪ್ರಸಿದ್ಧ ಚರ್ಚುಗಳು ಯಾವುವು ?
6) ವೆಟಿಕನ್ ನಗರವನ್ನು ಕುರಿತು ಕಾರಂತರು ತಿಳಿಸಿದ ವಿವರಗಳೇನು ?

ವಿವರವಾಗಿ ಉತ್ತರಿಸಿ : –

1) ಕೊಲೋಸಿಯಮ್ ಸ್ಮಾರಕವನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ ?
2) ರೋಮ್ ನಗರದ ಪ್ರಾಚೀನ ಮಂದಿರಗಳಲ್ಲಿ ಸುಸ್ಥಿತಿಯಲ್ಲಿರುವ ಸುಂದರ ದೇವಾಲಯಗಳನ್ನು ಕುರಿತು ಬರೆಯಿರಿ.
3) ಮೈಕೆಲ್ ಏಂಜಲೋ ನಿರ್ಮಿಸಿದ ಕ್ರಿಸ್ತನ ಶಿಲ್ಪದ ಸೌಂದರ್ಯವನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ ?
4) ರೋಮ್‌ನ ಆಧುನಿಕ ವಾಸ್ತು ಶೈಲಿಯು ಇಲ್ಲಿನ ರೈಲು ನಿಲ್ದಾಣದ ಮೂಲಕ ಹೇಗೆ ವ್ಯಕ್ತಗೊಂಡಿದೆ ?
5) ಸೈಂಟ್ ಪೀಟರ್ಸ್ ಬೆಸಿಲಿಕಾದ ವಾಸ್ತು ವಿಶೇಷತೆಯನ್ನು ಕಾರಂತರು ಹೇಗೆ ಚಿತ್ರಿಸಿದ್ದಾರೆ ? ವಿವರಿಸಿ.
6) ಮೈಕೆಲ್ ಏಂಜಲೋವಿನ ಬಾಳು ಸಾರ್ಥಕಗೊಳಿಸಿದ ಶಿಲ್ಪ ಕಲಾಕೃತಿಯನ್ನು ಕಾರಂತರು ವರ್ಣಿಸಿದ ಬಗೆ ತಿಳಿಸಿ.

ಭಾಷಾಭ್ಯಾಸ : –

1) ಇವುಗಳಿಗೆ ತತ್ಸಮ – ತದ್ಭವ ಬರೆಯಿರಿ.
   ಸ್ತಂಭ, ಸಾವಿರ, ಪ್ರಯಾಣ, ಬಣ್ಣ, ದೃಷ್ಟಿ, ಸ್ನೇಹ, ಯುಗ, ಬೀದಿ, ಆಶ್ಚರ್ಯ, ಯಾತ್ರೆ, ವಿಸ್ತಾರ, ಯೌವನ, ಮೃತ್ಯು.
2) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ.
   ಕೂರು, ಕೊನೆ, ಮಾಡು, ಕಲೆ
3) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.
   ಬೆರಗಾಗು, ಕಲ್ಪನಾಶಕ್ತಿ, ವಾಸ್ತುವೈಭವ, ಸ್ಮಾರಕ

# ಪಾಠ–3

## ಮೈಮೇಲೆ ದೇವರು, ದೆವ್ವ ಬರುವುದು ! ಏನು ?

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : –

1) ಅವಳನ್ನು ನೋಯಿಸಿದರೆ ನಿಮ್ಮ ಗತಿ ನೆಟ್ಟಗಿರುವುದಿಲ್ಲ. ಉಷಾರ್ !
2) ದೇವರು ಬಂತು, ದೇವರು ಬಂತು.
3) ಹ್ಞೂ, ಏನು ಬೇಕು ಅಂತ ಹೇಳಲಿ !
4) ತನಗೇನು ಬೇಕೆಂದು ಕೇಳಬಹುದು, ಪಡೆಯಲೂ ಬಹುದು.
5) ಮಾತಾಡದ ಬೇರೆ ಕಲ್ಲು ದೇವರಿಗಿಂತ ಮಾತಾಡುವ ಈ ದೇವರು ಚೆನ್ನಲ್ಲವೇ ?
6) ನಮ್ಮ ದುರಾದೃಷ್ಟ, ನಮ್ಮ ಕರ್ಮ ಇನ್ನೊಂದು ದೇವರ ಕೃಪೆಗೆ ಯತ್ನಿಸೋಣ.
7) ನನ್ನನ್ನು ನಂಬಿ ನೀವಿನ್ನೇನು ಮಾಡಬೇಕಾಗಿಲ್ಲ.
8) ಮನೋ–ವಿಶ್ಲೇಷಣೆ ಮತ್ತು ಮನೋ ಚಿಕಿತ್ಸೆಯಿಂದ ಅವರು ಗುಣಮುಖರಾಗುತ್ತಾರೆ.
9) ಅದರಲ್ಲಿ ಅತಿ ಮಾನವ ವಿಶೇಷವೇನೂ ಇಲ್ಲ.

ಬಹು ಆಯ್ಕೆಯ ಪ್ರಶ್ನೆಗಳು : –

1) 'ಶಾಂತಿ' ಇವರ ಸ್ನೇಹಿತೆ –
   ಅ) ಸಾವಿತ್ರಮ್ಮ  ಆ) ಗೌರಿ  ಇ) ಪೂಜಾರಿ  ಈ) ವೀರಭದ್ರ
2) ದೇವರು ಏನು ಹೇಳಿತು ಎಂದು ಅರ್ಥೈಸಿಕೊಳ್ಳುವವ–
   ಅ) ಪೂಜಾರಿಯ ಶಿಷ್ಯ  ಆ) ಪೂಜಾರಿ  ಇ) ಗೌರಿ  ಈ) ಶಾಂತಿ
3) 'ಸುಪ್ತ ಮನಸ್ಸು' ಮೇಲ್ಪದರಕ್ಕೆ ಬರುವುದು –
   ಅ) ಮನಸ್ಸಿನ ನೆಮ್ಮದಿ ಸಾಕಷ್ಟು ಕಲಕಿ ಹೋದಾಗ  ಆ) ಪರೋಕ್ಷ ಪ್ರತಿಭಟನೆ ಮಾಡಿದಾಗ
   ಇ) ಅನುಕರಣೆ ಸಮಯದಲ್ಲಿ  ಈ) ವೈದ್ಯರ ಬೇಟಿ ಮಾಡಿದಾಗ
4) ಜನ ಏನು ಮಾಡುತ್ತಾರೋ ತಾವೂ ಅದನ್ನೇ ಮಾಡುವಂಥವರು–
   ಅ) ಉನ್ಮಾದ ಮನೋಸ್ಥಿತಿಯ ಸಮಯದಲ್ಲಿ  ಆ) ಸಂಪರ್ಕ ಸಾಧನೆಯ ಸಮಯದಲ್ಲಿ
   ಇ) ಅನುಕರಣೆಯ ಸಮಯದಲ್ಲಿ  ಈ) ಪೂಜಾರಿಯನ್ನು ನೋಡಿದ ಸಂದರ್ಭದಲ್ಲಿ
5) ಮನೋಚಿಕಿತ್ಸೆ ಅಗತ್ಯವಾಗಿರುವುದು –
   ಅ) ದೆವ್ವ ಬರುವ ವ್ಯಕ್ತಿಗೆ  ಆ) ದೇವರು ಬರುವ ವ್ಯಕ್ತಿಗೆ
   ಇ) ದೆವ್ವ ಬಿಡಿಸುವ ವ್ಯಕ್ತಿಗೆ  ಈ) ಶಾಸ್ತ್ರ ಹೇಳುವವನಿಗೆ

ಒಂದು ವಾಕ್ಯದಲ್ಲಿ ಉತ್ತರಿಸಿ : –

1) ಗೌರಿ ಯಾರು ?
2) ಯಾವ ವಿಶೇಷದ ಪರಿಣಾಮವಾಗಿ ಮೈ ಮೇಲೆ ದೆವ್ವ ಬರುತ್ತದೆ ?
3) ಯಾರ ಮೈ ಮೇಲೆ ಹೆಚ್ಚಾಗಿ ದೆವ್ವ ಬರುತ್ತದೆ ?
4) ಯಾವುದು ಜನರ ದೃಷ್ಟಿಯಲ್ಲಿ ಸ್ವಾಗತಾರ್ಹ ವಿಶೇಷವಾಗಿದೆ ?

5) ಪ್ರಮುಖ ನಿರ್ಧಾರಗಳನ್ನು ಮಾಡುವಾಗ ಯಾರ ಸಲಹೆ–ಮಾರ್ಗದರ್ಶನಗಳನ್ನು ಬಯಸುತ್ತಾರೆ ?

6) ಅನೇಕ ದೇವಾಲಯಗಳ ಆದಾಯ ಮತ್ತು ಜನಪ್ರಿಯತೆಯ ಮೂಲ ಯಾವುದು ?

7) ಯಾವಾಗ ಪೂಜಾರಿಯ ಕೀರ್ತಿ ಪರಿಮಳದಂತೆ ಹರಡುತ್ತದೆ ?

8) ಜನರು ತಮ್ಮ ವಿಫಲತೆಯನ್ನು ಯಾವಾಗ ಒಪ್ಪಿಕೊಳ್ಳುತ್ತಾರೆ ?

9) ಯಾವಾಗ ಭಕ್ತರಿಗೆ ವಿಶೇಷ ಕೊಡುಗೆಗಳು ಲಭಿಸುತ್ತವೆ ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : –

1) ಪೂಜಾರಿಯ ಮೇಲೆ ದೇವರು ಬಂದಾಗ ಆದ ಬದಲಾವಣೆಗಳಾವುವು ?

2) ಮನೋ–ಸಾಮಾಜಿಕ–ಸಾಂಸ್ಕೃತಿಕ ವಿಶೇಷವನ್ನು ಪರಿಚಯಿಸಲು ಲೇಖಕರು ನೀಡುವ ಮೂರು ವಿವರಣೆಗಳಾವುವು ? ಹೆಸರಿಸಿ.

3) ಪರೋಕ್ಷ ಪ್ರತಿಭಟನೆ ಮತ್ತು ಸಂಪರ್ಕ ಸಾಧನೆ ಎಂದರೇನು ?

4) ಅನುಕರಣೆ (ಸಮೂಹ ಸನ್ನಿ) ಎಂದರೇನು ? ಲೇಖಕರು ನೀಡುವ ಸಾಮಾನ್ಯ ಉದಾಹರಣೆಗಳಾವುವು ?

5) ಯಾವಾಗ ಇತರರ ಸಹಾನುಭೂತಿ–ಸಹಾಯದ ಅಗತ್ಯವಿರುತ್ತದೆ ?

6) ಪೂಜಾರಿಯು ನೊಂದವರಿಗೆ ಸಾಂತ್ವನವನ್ನು ಹೇಗೆ ನೀಡುತ್ತಾನೆ ?

7) ಜನರು ಯಾವಾಗ ಮರಳಿ ತಮ್ಮ ಪ್ರಯತ್ನವನ್ನು ಮಾಡುತ್ತಾರೆ ?

8) ಜನರು ಪುರುಷ ಪ್ರಯತ್ನಗಳನ್ನು ಯಾವಾಗ ಕೈ ಬಿಡುತ್ತಾರೆ ?

9) ಜನರು ಯಾವಾಗ ಸಾಲಗಾರರಾಗುತ್ತಾರೆ ?

10) ಕಷ್ಟಕ್ಕೀಡಾದ ವ್ಯಕ್ತಿಗೆ ಯಾವುದು ಆಸರೆಯಾಗಿ ನಿಲ್ಲಬಹುದು ?

11) ಆತ್ಮ ವಿಶ್ವಾಸವನ್ನು ಹೆಚ್ಚಿಸುವ ಅಂಶಗಳಾವುವು ?

12) ದೆವ್ವ ಮತ್ತು ದೇವರು ಬರುವ ವ್ಯಕ್ತಿಗಳಿಗೆ ಲೇಖಕರು ಸೂಚಿಸುವ ಮದ್ದುಗಳು (ಚಿಕಿತ್ಸೆ) ಯಾವುವು?

ವಿವರವಾಗಿ ಉತ್ತರಿಸಿ : –

1) ಮೈ–ಮೇಲೆ ದೆವ್ವ ಬರುವುದರ ಬಗ್ಗೆ ಮನೋವೈಜ್ಞಾನಿಕ ಅಧ್ಯಯನಗಳು ಯಾವ ವಿವರಣೆಯನ್ನು ನೀಡುತ್ತವೆ ?

2) ಉನ್ಮಾದ ಮನೋಸ್ಥಿತಿ ಎಂದರೇನು ? ವಿವರಿಸಿ.

3) ಮೈ ಮೇಲೆ ದೇವರು ಬರುವ ವ್ಯಕ್ತಿ ಕಟ್ಟುವ ಆಟಗಳಾವುವು ? ಅವುಗಳನ್ನು ಇತರರೂ ಮಾಡಿ ತೋರಿಸಲು ಸಾಧ್ಯವೇ ? ವಿವರಿಸಿ.

4) ಮೈ–ಮೇಲೆ ದೇವರು ಬರುವುದು ನಮ್ಮ ಜನಗಳ ಸ್ವಾಗತಾರ್ಹ ವಿಶೇಷ ಹೇಗೆ ? ವಿವರಿಸಿ.

ಭಾಷಾಭ್ಯಾಸ : –

1) ಇವುಗಳನ್ನು ಬಿಡಿಸಿ ಬರೆಯಿರಿ.
ಶೈತ್ಯೋಪಚಾರ, ಕಣ್ತೆರೆ, ಕರ್ಪೂರದಾರತಿ, ರಥೋತ್ಸವ, ಮೇಲ್ಪದರ

2) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ.
ವರ್ಷ, ಕರಿ, ನೆರೆ, ಅಡಿ, ಮರೆ, ಭೂತ

3) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.
ದೆವ್ವ, ಗಂಡ, ಅಪಾಯ, ಜ್ಞಾನ, ಕರ್ಮ, ಕಂದಾಚಾರ

4) ಕೆಳಗಿನ ನುಡಿಗಟ್ಟುಗಳನ್ನು ನಿಮ್ಮ ವಾಕ್ಯದಲ್ಲಿ ಪ್ರಯೋಗಿಸಿ.

**ವೇದವಾಕ್ಯ, ಶ್ವೇತೋಪಚಾರ, ಹೊಟ್ಟೆಯಲ್ಲಿ, ಹಾಕಿಕೊಂಡು**

## ಪಾಠ–4

## ದಾರಿ ಯಾವುದಯ್ಯಾ ಕಾಲೇಜಿಗೆ

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : –

1) ನಾನು ಉಳಿದ ಕೆಲಸಗಾರರೊಡನೆ ದುಡಿಯ ಹತ್ತಿದೆ.
2) ನಿನ್ನ ಮಗನು ಮುಂದೆ ಓದಲು ಹೋಗಬೇಕು.
3) ನಿನ್ನ ಮಗನ ಜವಾಬ್ದಾರಿ ನನಗೆ ಬಿಡು
4) ಖಾನಾವಳಿಯ ಊಟ ಮಾಡಿದರೆ ನಾವು ಪೈಲವಾನ ಆಗುವೆವೆಂದು ಮಾತಾಡಿದೆವು.
5) ಆಕೆ ಮಾಲಾಸಿನ್ಹಾಳಂತೆ ಕಾಣುತ್ತಾಳೆ.
6) ನನಗೆ ಹಾಸ್ಟೆಲ್‌ನಲ್ಲಿರಲು ಫೀ ತುಂಬಿರುವರು.
7) ನಾನು ಕಾಳಜಿ ಮಾಡದಿದ್ದರೆ ನಮ್ಮ ನೌಕರಿ ಉಳಿತಾದ. ಏನ್ರಪಾ ?
8) ನಾನೇ ಪ್ಯೂನ್‌ನಂತೆ ಕಾಣುತ್ತಿದೆ.
9) ಈ ಉತ್ತರ ಪತ್ರಿಕೆಯ ಉತ್ತರಗಳು ಉತ್ಕೃಷ್ಟ.

ಬಹು ಆಯ್ಕೆಯ ಪ್ರಶ್ನೆಗಳು : –

1) ಚೆನ್ನಾಗಿ ಓದಬೇಕೆಂದರೆ ಈ ಕಾಲೇಜು ಒಳ್ಳೆಯದು–
   ಅ) ಫರ್ಗುಸನ್ ಕಾಲೇಜು    ಆ) ಕರ್ನಾಟಕ ಸೈನ್ಸ್ ಕಾಲೇಜು
   ಇ) ಪಿ.ಸಿ. ಜಾಬಿನ್ ಸೈನ್ಸ್ ಕಾಲೇಜು    ಈ) ಕುವೆಂಪು ಕಾಲೇಜು
2) ಸಂಸ್ಕೃತ ಗುರುಗಳ ಶಿಷ್ಯರು ಪಡೆದ ಸ್ಥಾನ –
   ಅ) ಎರಡನೇ ಸ್ಥಾನ    ಆ) ಪ್ರಥಮ ಸ್ಥಾನ
   ಇ) ಮೂರನೇ ಸ್ಥಾನ    ಈ) ನಾಲ್ಕನೆಯ ಸ್ಥಾನ
3) ಲೇಖಕರ ತಂದೆಯ ಸಂತೋಷಕ್ಕೆ ಕಾರಣ –
   ಅ) ಸರ್ಕಾರಿ ನೌಕರಿ ಪಡೆದದ್ದರಿಂದ    ಆ) ರ್‍ಯಾಂಕ್ ಪಡೆದದ್ದರಿಂದ
   ಇ) ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಸೇರಿದ್ದರಿಂದ    ಈ) ಕಾಲೇಜಿಗೆ ಹೋಗಿದ್ದರಿಂದ
4) ಲೇಖಕರನ್ನು ಹಾಸ್ಟೆಲ್‌ಗೆ ಕರೆತಂದವರು–
   ಅ) ಜವಾನ    ಆ) ಪ್ರಿನ್ಸಿಪಾಲ್    ಇ) ಉಪನ್ಯಾಸಕ    ಈ) ಗೆಳೆಯ

ಒಂದು ವಾಕ್ಯದಲ್ಲಿ ಉತ್ತರಿಸಿ : –

1) ಪುಣೆಯಲ್ಲಿನ ಪ್ರಸಿದ್ಧ ಕಾಲೇಜಿನ ಹೆಸರೇನು ?
2) ಲೇಖಕರು ಮೊದಲಿಗೆ ಕೆಲಸಕ್ಕೆ ಸೇರಿದ್ದು ಎಲ್ಲಿ ?
3) ಲೇಖಕರ ತಂದೆಯವರು ಎಲ್ಲಿಯವರೆಗೆ ಶಿಕ್ಷಣ ಪಡೆದಿದ್ದರು ?
4) ಜಾಣರ ಕಾಲೇಜು ಎಂದು ಹೆಸರು ಪಡೆದಿದ್ದ ಕಾಲೇಜು ಯಾವುದು ?
5) ಲೇಖಕರು ಧಾರವಾಡಕ್ಕೆ ಯಾರ ಜೊತೆ ಹೋದರು?

6) ಚನ್ನಮಲ್ಲ ಅಬಕಾರ ಎಂಬುವವರು ಯಾವು ?

7) ಜಾಬಿನ್ ಕಾಲೇಜಿನ ಪ್ರಾಚಾರ್ಯರ ಹೆಸರು ?

8) ಅಬಕಾರ ಅವರ ಮಗನ ಹೆಸರೇನು ?

9) ಲೇಖಕರನ್ನು ಹಾಸ್ಟೆಲ್‌ಗೆ ಕರೆದೊಯ್ದವರು ಯಾರು ?

10) ಝುವಾಲಜಿ ವಿಷಯ ಬೋಧಿಸುವ ಉಪನ್ಯಾಸಕರ ಹೆಸರೇನು?

<u>ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ</u> : -

1) ಲೇಖಕರು ಯಾರೊಡನೆ ಇದ್ದು ತಾನೂ ಜಾಣನಾಗಬೇಕೆಂದುಕೊಂಡರು ?

2) ಸಂಸ್ಕೃತ ಗುರುಗಳು ಮೊದಲೇ ಏನೆಂದು ಸಾರಿ ಬಿಟ್ಟಿದ್ದರು ?

3) ಲೇಖಕರ ತಂದೆಗೆ ಏಕೆ ಸಂತೋಷವಾಯಿತು ?

4) ಲೇಖಕರು ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು ?

5) ಊರಿನ ಹಿರಿಯರು ಲೇಖಕರ ತಂದೆಯೊಡನೆ ಏನೆಂದು ಹೇಳಿದರು.

6) ಅಬಕಾರಿ ಅವರ ಮಗನ ಹೆಸರೇನು ? ಮತ್ತು ಅವರು ಏನೆಂದು ಆಶಿಸಿದ್ದರು ?

7) ಗಾಂಧೀಟೋಪಿಯ ಬಗ್ಗೆ ಲೇಖಕರ ತಂದೆಯವರಿಗೆ ಯಾವ ಭಾವನೆಯಿತ್ತು ?

8) ಹುಬ್ಬಳ್ಳಿಯಲ್ಲಿಯ ಹಾಸ್ಟೆಲಿನ ವಾತಾವರಣ ಯಾವ ರೀತಿಯಲ್ಲಿತ್ತು ?

ವಿವರವಾಗಿ ಉತ್ತರಿಸಿ : -

1) ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಲೇಖಕರು ಮುಂದಿನ ಶಿಕ್ಷಣಕ್ಕೆ ಯಾವ ರೀತಿ ತಯಾರಿ ನಡೆಸಿದ್ದರು ?

2) ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರದ ಪರಿಸರಕ್ಕೆ ಕಾಲಿಟ್ಟಾಗ ಎದುರಿಸುವ ಸಮಸ್ಯೆಗಳು ಪ್ರಸ್ತುತ ಪಾಠದಲ್ಲಿ ಹೇಗೆ ಚಿತ್ರಿತವಾಗಿದೆ ?

3) ಲೇಖಕರ ಕಾಲೇಜು ಜೀವನದ ಹಿನ್ನೆಲೆಯಲ್ಲಿ ಆ ಕಾಲದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಬರೆಯಿರಿ.

ಭಾಷಾಭ್ಯಾಸ : -

1) ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.
ಅರ್ಥ, ಶಕ್ಯ, ಚಿಂತೆ, ಜವಾಬ್ದಾರಿ, ಪಾಸು, ಆದರ

2) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ.
ನೆಲ, ಗ್ರಾಮ, ಜವಾನ, ದೇವರು, ಬ್ರಾಹ್ಮಣ, ಸಂಜೆ, ತಂದೆ, ಮನೆ, ಗಾಬರಿ

3) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.
ಮೀಸಲಾತಿ, ಅಭಿನಂದಿಸು, ಕಣ್ಣುತೆರೆ, ಹಣ್ಣುಗಾಯಿ-ನೀರುಗಾಯಿ.

## ಪಾಠ–5

## ಕುಬುಸ

<u>ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ</u> : –

1) ಯಾವ ಕೇಡಿಗಂತ ನಮ್ ನೆಟ್ಕಲ್ಲು ಇಸ್ಕೊಲಿಗೋತೀನಿ ಅಂತತೆ
2) ಓಹೋ ತಾನು ಎಲ್ಲರಿಗೂ ಅಚ್ಚು–ಮೆಚ್ಚು
3) ಓಯ್ ನಮ್ನೆಟ್ಕಲ್ಲು ದೊಡ್ಡಾಪೀಸ್ರಾಗಿಬಿಟ್ಟಾನೆ.
4) ಕುಬುಸ ತೊಡೋಳ್ನ ಅದೆಂಗೋ ಮದ್ವಿ ಆಗ್ತೀಯಾ ?
5) ಇಲ್ಲದ್ದನ್ನು ಇದೆ ಅಂತ ತಿಳ್ಕೊಂಡು ಜೀವನ ನಡೆಸಿಕೊಂಡು ಹೋಗ್ರಿ
6) ಮೊಮ್ಮಕ್ಕಳ್ನ ನೋಡೊ ಆಸೆ ಇಲ್ಲೇನಬೇ
7) ಕರುಳಿನ ಕುಡಿಗಳನ್ನು ನೋಡುವುದೂ ಒಂದೆ, ದೇವಾನುದೇವತೆಗಳನ್ನು ನೋಡುವುದೂ ಒಂದೆ
8) ಇದ್ಯಾವ ಸೀಮೆ ಊರಿಗೆ ಕರ್ಕೊಂಡು ಬಂದಿಯೊ ?
9) ಕುಬಸ ತೊಟ್ಕೊಂಡು ಅದ್ಯಾವ ನರಕಕ್ಕೋಗ್ಲಿ ?

<u>ಬಹು ಆಯ್ಕೆಯ ಪ್ರಶ್ನೆಗಳು</u> : –

1) ನೆಟ್ಕಲ್ಲುವಿನ ಊರು–
   ಅ) ನಾಯಕಟ್ಟಿ ಆ) ವಡ್ಡಟ್ಟಿ ಇ) ಗೊರಟ್ಟಿ ಈ) ಸಾದಟ್ಟಿ
2) ನೆಟ್ಕಲ್ಲು ಚಿಕ್ಕಂದಿನಿಂದಲೂ ನೋಡಬೇಕೆಂದುಕೊಂಡಿದ್ದ ನಗರ –
   ಅ) ಮೈಸೂರು ಆ) ದೆಹಲಿ ಇ) ಬೆಂಗಳೂರು ಈ) ಕಲ್ಕತ್ತಾ
3) ಕಮಲ ಎಂಬ ಯುವತಿಯು ಫೇಲಾಗಿದ್ದ ತರಗತಿ–
   ಅ) ಏಳು ಆ) ಹನ್ನೆರಡು ಇ) ಆರು ಈ) ಹತ್ತು
4) ವಡವಟ್ ದಂಪತಿಗಳ ಮಕ್ಕಳ ಸಂಖ್ಯೆ –
   ಅ) ನಾಲ್ಕು ಆ) ಮೂರು ಇ) ಎರಡು ಈ) ಐದು
5) ಸಮಾಜ ಶಾಸ್ತ್ರಜ್ಞ–
   ಅ) ಹೆಚ್.ಜಿ ರಾಜು ಆ) ವೆಂಕಟೇಶ ಗಲಿಗಲಿ
   ಇ) ಅರುಣ್ ಕುಮಾರ್ ಮೂಲಿಮನಿ ಈ) ಚಲಪತಿ ಕೊಂಬಳಿ

<u>ಒಂದು ವಾಕ್ಯದಲ್ಲಿ ಉತ್ತರಿಸಿ</u> : –

1) ಶಿಲಾಯುಗ ಕಾಲದ ಎಲ್ಲಾ ಲಕ್ಷಣ –ಸ್ವಭಾವಗಳನ್ನು ಉಳಿಸಿಕೊಂಡಿದ್ದ ಊರು ಯಾವುದು ?
2) ಕೇಂದ್ರ ಸರ್ಕಾರದವರು ವಾಪಸ್ಸಾಗುತ್ತಿದ್ದುದು ಏಕೆ ?
3) ಯಾವ ಊರು ರಾಜಕೀಯ ನಕ್ಷೆಯಲ್ಲಿ ಜಾಗ ಪಡೆದಿರಲಿಲ್ಲ ?
4) ಮುದುಕಿ ಕಂಡಿದ್ದ ಕನಸು ಯಾವುದು ?

5) ಗ್ರಾಮದ ಹಿರೀಕ ಯಾರು ?
6) ನೆಟ್ಟಕಲ್ಲು ಚಿಕ್ಕವನಿದ್ದಾಗ ಯಾವ ನಗರ ನೋಡಬೇಕೆಂದು ಆಸೆ ಪಟ್ಟಿದ್ದನು ?
7) ನೆಟ್ಟಕಲ್ಲುವಿನ ಅಜ್ಜಿಯ ಹೆಸರೇನು ?
8) ವಡವಟ್‌ನು ಯಾವ ನೌಕರಿಗೆ ಸೇರಿಕೊಂಡನು ?
9) ಕದ್ದು ಮುಚ್ಚಿ ಕುಬುಸ ತೊಡುತ್ತಿದ್ದ ಕಾರಣದಿಂದಾಗಿ ಯಾರ ವಂಶ ನಿರ್ನಾಮವಾಯಿತು ?
10) ಯಾರ ಮಗಳನ್ನು ವಡವಟ್ ಮದುವೆಯಾದನು ?
11) ವಡವಟ್‌ನ ಮದುವೆ ಎಲ್ಲಿ ಆಯಿತು ?
12) ವಡವಟ್‌ನ ಹೆಂಡತಿಯ ಹೆಸರೇನು ?
13) ವಡ್ಡಟ್ಟಿಯ ಗ್ರಾಮ ದೇವತೆ ಯಾರು ?
14) ಅತಿಥಿ–ಅಭ್ಯಾಗತರು ಮುದುಕಿಯ ಕಡೆ ನೋಡಿದ್ದು ಯಾವ ರೀತಿ ?
15) ಹವ್ಯಾಸಿ ಛಾಯಾಗ್ರಾಹಕ ಯಾರು ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : –

1) ವಡ್ಡಟ್ಟಿ ಜನರ ಗುಣ–ಸ್ವಭಾವಗಳನ್ನು ಕುರಿತು ಬರೆಯಿರಿ.
2) ನೆಟ್ಟಕಲ್ಲುವಿನ ಪೂರ್ವಜರ ಸಾಧನೆಗಳೇನು ?
3) ಅಜ್ಜಿಯು ತನ್ನ ಮರಿಮೊಮ್ಮಗನನ್ನು ಹೇಗೆ ಸಾಕಿದಳು ?
4) ನೆಟ್ಟಕಲ್ಲುನ ಓದಿಗೆ ಸಂಬಂಧಿಸಿದಂತೆ ಮುದುಕಿಯ ಮನಸ್ಸನ್ನು ಊರಿನ ಜನ ಪರಿವರ್ತಿಸಿದ ಬಗೆ ಹೇಗೆ ?
5) ನೆಟ್ಟಕಲ್ಲುನನ್ನು ದೈವಾಂಶ ಸಂಭೂತನೆಂದು ಊರಿನವರು ಏಕೆ ತಿಳಿದಿದ್ದರು ?
6) ಅಟೆಂಡರ್ ಕೆಲಸಕ್ಕೆ ಸೇರಿದ ನೆಟ್ಟಕಲ್ಲು ತನ್ನ ಜೀವನ ಶೈಲಿಯನ್ನು ಹೇಗೆ ಬದಲಾಯಿಸಿಕೊಂಡ ?
7) ನೆಟ್ಟಕಲ್ಲು ತನ್ನ ಹೆಸರು ಏನೆಂದು ಬದಲಾಯಿಸಿಕೊಂಡನು ?
8) ವಡ್ಡಟ್ಟಿಯ ಜನರು ನೆಟ್ಟಕಲ್ಲುವಿನ ಬಗೆ ಹೇಗೆ ಪ್ರತಿಕ್ರಿಯಿಸಿದರು ?
9) ವಡವಟ್ಟನು ಹೇಗೆ ಕನ್ಯಾನ್ವೇಷಣೆಗೆ ತೊಡಗಿದ ?
10) ಅಯ್ಯಾಳಪ್ಪ ನವದಂಪತಿಗಳಿಗೆ ಏನೆಂದು ಆಶೀರ್ವದಿಸಿದನು ?
11) ವಡ್ಡಟ್ಟಿಯ ಜನರು ಕುಬುಸವನ್ನು ಏಕೆ ಧರಿಸುತ್ತಿರಲಿಲ್ಲ.
12) ವಡ್ಡಟ್ಟಿಯ ಜನರು ಮುದುಕಿಯ ಮನಸ್ಸನ್ನು ಹೇಗೆ ಪರಿವರ್ತಿಸಿದರು ?
13) ಮುದುಕಿಯ ಬಸ್ಸಿನ ಪ್ರಯಾಣವನ್ನು ಕುರಿತು ಬರೆಯಿರಿ.

ವಿವರವಾಗಿ ಉತ್ತರಿಸಿ : –

1) ನಗರ ಜೀವನ ನೆಟ್ಟಕಲ್ಲುವಿನ ಮೇಲೆ ಬೀರಿದ ಪ್ರಭಾವಗಳನ್ನು ವಿವರಿಸಿ.
2) ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕಮಲಳು ಹೇಗೆ ಯೋಚಿಸಿದಳು ?
3) ಮುದುಕಿಗೆ ಕುಬಸ ತೊಡಿಸಲು ವಡವಟ್ ದಂಪತಿಗಳು ಪಟ್ಟ ಪಾಡನ್ನು ವಿವರಿಸಿರಿ.
4) ಗ್ರಾಮ ಹಾಗೂ ನಗರ ಜೀವನದ ಯೋಚನಾ ವಿಧಾನದ ವ್ಯತ್ಯಾಸವನ್ನು ಕಥೆಯ ಹಿನ್ನೆಲೆಯಲ್ಲಿ ಚರ್ಚಿಸಿರಿ.
5) ತಲೆಮಾರುಗಳ ನಡುವಿನ ವೈರುಧ್ಯ ಮುದುಕಿ ಮತ್ತು ಮಗನ ಪಾತ್ರಗಳ ಮೂಲಕ ಹೇಗೆ ಮೂಡಿ ಬಂದಿದೆ ? ಚರ್ಚಿಸಿರಿ.

ಭಾಷಾಭ್ಯಾಸ : –

1) ಇವುಗಳನ್ನು ಬಿಡಿಸಿ ಬರೆಯಿರಿ.

**ಸಹೋದ್ಯೋಗಿ, ಕನ್ಯಾನ್ವೇಷಣೆ, ದೇವಾನುದೇವತೆ, ಮೆರವಣಿಗೋಪಾದಿ, ಪ್ರತಿಯೋರ್ವ, ಮುಸ್ಸಂಜೆ, ವಂಶಾವಳಿ, ಪದಾಭಿವಂದನೆ, ಅತ್ಯುತ್ಸಾಹ, ರೋಷಾವೇಷ**

2) ಇವುಗಳ ವಿರುದ್ಧ ಪದಗಳನ್ನು ಬರೆಯಿರಿ.
**ಗ್ರಾಮೀಣ, ಕನಸು, ಬಾಲ್ಯ, ಹಿಂಗಾಲ, ಆಸೆ, ಸುಂದರ, ರಾತ್ರಿ, ಅಪರಾಧ, ಹತ್ತಿರ**

3) ಪಠ್ಯದಲ್ಲಿರುವ ಅನ್ಯದೇಶ್ಯ ಶಬ್ದಗಳನ್ನು ಗುರುತಿಸಿ.
**ಉದಾ : ಜಾಬು, ಗೌರಮೆಂಟ್, ಪೋಸ್ಟ್‌ಮಾಸ್ಟರ್, ಅಟೆಂಡರ್, ಪಗಾರ**

4) ಈ ಕೆಳಗಿನ ಶಬ್ದಗಳಿಂದ ಸ್ವಂತ ವಾಕ್ಯ ರಚಿಸಿ.
**ಅವಶೇಷ, ನತದೃಷ್ಟ, ಯಕಃಶ್ಚಿತ್, ಜಾತಕಪಕ್ಷಿ, ತಾಳೆಹಾಕು**

5) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.
**ಸೊಪ್ಪುಹಾಕು, ಕಿಡಿಕಾರು, ಚಾಣುಸುತ್ತಿಗೆ, ಪ್ರಹರಿಸು, ಮೈಚಳಿಬಿಡು, ಕಣ್ಣುತೆಗೆ, ಹಣ್ಣುಗಾಯಿ–ನೀರುಗಾಯಿ.**

## ಪಾಠ–6

## ನಂಜನಗೂಡು ತಿರುಮಲಾಂಬ

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : –

1) ತಾಯಿಯಿಲ್ಲದ ತಬ್ಬಲಿಯಾಗಬೇಕಾಯಿತು.
2) ಅರುಣೋದಯವನ್ನು ಕತ್ತಲೆ ನುಂಗಿತು.
3) ಸರಸ್ವತಿ ಪೊರೆಯೆನ್ನನು
4) ಹಿತೈಷಿಣಿ ಮೌನಿಯಾದಳು
5) ತಿರುಮಲಾಂಬ ಅವರ ಬದುಕು ಕೂಡ ಇದಕ್ಕೆ ಅಪವಾದವಾಗಲಿಲ್ಲ.
6) ಯಾವ ಭಾಷೆ ಕಲಿತರೂ ಅವರು ಬರೆದದ್ದು ಮಾತ್ರ ಕನ್ನಡದಲ್ಲಿ
7) ಕ್ಲೋರೋಫಾರಂ ಕೊಡದೆ ಶಸ್ತ್ರ ಚಿಕಿತ್ಸೆ ಮಾಡಿ
8) ತಿಂಡಿ ಹಂಚುವಾಗಲೂ ಅದೇ ಶಿಸ್ತು

ಬಹು ಆಯ್ಕೆಯ ಪ್ರಶ್ನೆಗಳು : –

1) ತಿರುಮಲಾಂಬ ಅವರ ತಂದೆಯ ವೃತ್ತಿ –
   ಅ) ಉಪನ್ಯಾಸಕರು   ಆ) ವಕೀಲರು   ಇ) ಎಂಜಿನಿಯರ್   ಈ) ವೈದ್ಯರು
2) ತಿರುಮಲಾಂಬ ಅವರ ಗಂಡ ಸತ್ತಿದ್ದು –
   ಅ) ಪ್ಲೇಗಿನಿಂದ   ಆ) ಕಾಲರಾದಿಂದ   ಇ) ಹಾವು ಕಡಿತದಿಂದ   ಈ) ಅಗ್ನಿ ದುರಂತದಿಂದ
3) 'ಸದಾಚಾರ' ಎಂಬ ಪ್ರಬಂಧ ಪ್ರಕಟವಾದ ಪತ್ರಿಕೆ –
   ಅ) ಕರ್ನಾಟಕ ನಂದಿನಿ   ಆ) ಸನ್ಮಾರ್ಗದರ್ಶಿ   ಇ) ಸರ್ವೋದಯ   ಈ) ಸದಾಚಾರ
4) ತಿರುಮಲಾಂಬ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನಿಸಿದ ವರ್ಷ–
   ಅ) 1989   ಆ) 1979   ಇ) 1969   ಈ) 1999
5) ತಿರುಮಲಾಂಬ ಅವರು ನಿಧನರಾದದ್ದು –
   ಅ) 1982   ಆ) 1972   ಇ) 1962   ಈ) 1992

ಒಂದು ವಾಕ್ಯದಲ್ಲಿ ಉತ್ತರಿಸಿ : –

1) ತಿರುಮಲಾಂಬ ಅವರ ತಂದೆ–ತಾಯಿಗಳಾರು ?
2) ಎಷ್ಟನೇ ವರ್ಷದಲ್ಲಿ ತಿರುಮಲಾಂಬ ತಾಯಿಯಿಲ್ಲದ ತಬ್ಬಲಿಯಾಗಬೇಕಾಯಿತು ?
3) ತಿರುಮಲಾಂಬ ಅವರು ಶಾಲೆಯನ್ನು ಬಿಡಲು ಕಾರಣವೇನು ?
4) ತಿರುಮಲಾಂಬ ಅವರಿಗೆ ವೈಧವ್ಯ ಪ್ರಾಪ್ತವಾದುದು ಎಷ್ಟನೇ ವಯಸ್ಸಿನಲ್ಲಿ ?
5) ತಿರುಮಲಾಂಬ ಅವರ ಮೊದಲ ಪ್ರಕಟಿತ ಪ್ರಬಂಧ ಯಾವುದು ?
6) ತಿರುಮಲಾಂಬ ಅವರು ನಡೆಸುತ್ತಿದ್ದ ಪ್ರಕಟಣಾ ಮಾಲೆಗಳಾವುವು ?
7) ಯಾವಾಗ ಅವರ ಬರಹಕ್ಕೆ ಬಿಡುವು ಸಿಗುತ್ತಿತ್ತು ?

8) ತಿರುಮಲಾಂಬ ಅವರಿಗೆ ವಾತರೋಗದ ಸಮಸ್ಯೆ ಯಾವ ವಯಸ್ಸಿನಿಂದಲೇ ಇತ್ತು ?

9) ನಂಜನಗೂಡು ತಿರುಮಲಾಂಬ ಪ್ರಶಸ್ತಿಯನ್ನು ಯಾವ ಸಂಸ್ಥೆ ಸ್ಥಾಪಿಸಿದೆ ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : –

1) ತಿರುಮಲಾಂಬ ಎಲ್ಲಿ, ಯಾವಾಗ ಜನಿಸಿದರು ?

2) ತಿರುಮಲಾಂಬ ಅವರ ತಂದೆ ಮಗಳಿಗೆ ಹೇಗೆ ಧೈರ್ಯ ತುಂಬಿದರು ?

3) ಯಾವ–ಯಾವ ಕ್ಷೇತ್ರಗಳಲ್ಲಿ ತಿರುಮಲಾಂಬ ಅವರು ಸಾಧನೆಗೈದಿದ್ದಾರೆ ?

4) ತಿರುಮಲಾಂಬ ಅವರಿಗೆ ಮೊದಲ ಗೀತ ರಚನೆಯಲ್ಲಿ ಸ್ಫೂರ್ತಿ ನೀಡಿದ ಸನ್ನಿವೇಶ ಯಾವುದು ?

5) ತಿರುಮಲಾಂಬ ಅವರು ರಚಿಸಿದ ಕೃತಿಗಳಾವುವು ?

6) ಮಹಾರಾಜರಿಂದ ತಿರುಮಲಾಂಬ ಅವರಿಗೆ ದೊರೆತ ಸಹಾಯವೇನು ?
ಅದನ್ನು ಅವರು ತೀರಿಸಿದ ಬಗೆ ಹೇಗೆ ?

7) ತಿರುಮಲಾಂಬ ಅವರು ಸಂಪಾದಿಸುತ್ತಿದ್ದ ಪತ್ರಿಕೆಗಳು ಯಾವುವು ?

8) ತಿರುಮಲಾಂಬ ಅವರದು ಏಕಲವ್ಯ ಪರಂಪರೆ ಹೇಗೆ ?

9) ತಿರುಮಲಾಂಬ ಅವರ ಸಾಹಿತ್ಯ ಸೇವೆಗೆ ಹೇಗೆ ಪ್ರೋತ್ಸಾಹ ದೊರೆಯಿತು ?

10) ತಿರುಮಲಾಂಬ ಯಾವ–ಯಾವ ಭಾಷೆಗಳನ್ನು ಬಲ್ಲವರಾಗಿದ್ದರು ?

ವಿವರವಾಗಿ ಉತ್ತರಿಸಿ : –

1) ತಿರುಮಲಾಂಬ ಅವರ ಬಾಲ್ಯ ಜೀವನವನ್ನು ಚಿತ್ರಿಸಿ.

2) ತಿರುಮಲಾಂಬ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

3) ತಿರುಮಲಾಂಬ ಅವರ ವ್ಯಕ್ತಿತ್ವ ಮತ್ತು ಮನೋಸ್ಥೈರ್ಯಗಳನ್ನು ಸಂಗ್ರಹಿಸಿ ಬರೆಯಿರಿ.

4) ಕುಟುಂಬದ ಹಿರಿಯಕ್ಕನಾಗಿ ತಿರುಮಲಾಂಬ ಅವರು ನಿರ್ವಹಿಸಿದ ಪಾತ್ರವೇನು ? ವಿಶ್ಲೇಷಿಸಿ.

ಭಾಷಾಭ್ಯಾಸ : –

1) ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :
ವೃತ್ತಿ, ವ್ಯಯ, ಅಮೃತ, ದುರ್ಬಲ, ನಿರ್ಮಮತೆ, ಶಾಶ್ವತ, ಸಮಾಧಾನ, ಉತ್ಸಾಹ, ಪ್ರಕಟ, ಜವಾಬ್ದಾರಿ, ವಿವಾಹಿತ

2) ಇವುಗಳನ್ನು ಬಿಡಿಸಿ ಬರೆಯಿರಿ :
ಅರುಣೋದಯ, ಮುಖ್ಯೋಪಾಧ್ಯಾಯ, ವಿನಿಯೋಗವಾಗು, ಕೊನೆಯುಸಿರು, ಅದರೊಡಲು, ಪರಾವಲಂಬಿ, ಸೂರ್ಯೋದಯ

3) ಇವುಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ :
ಅಗ್ನಿಕುಂಡ, ಬಾಳುತಳ್ಳು, ಕೊನೆಯುಸಿರೆಳೆ, ಕತ್ತಲೆ ನುಂಗು, ಕಣ್ಮುಚ್ಚು

## ಪಾಠ–7

## ದೋಸೆ ರಾಜಕೀಯ

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ : –

1) ತಿನ್ನಲು ಬೇಕು, ಚರ್ಚೆಗೆ ಬೇಡ ಎಂದರೆ ಹೇಗೆ ?
2) ದೋಸೆಯ ಟೆಕ್ನಾಲಜಿಯಲ್ಲಿ ಬಹಳ ಬದಲಾವಣೆಯಾಗಿದೆ.
3) ಹೋಟೆಲ್ ದೋಸೆ ತಿನ್ನಲು ನಾವೇನು ಗಂಡಸರೇ ?
4) ಅಪ್ಪಯ್ಯ ಅರೆಯಲಿಕ್ಕೆ ಒಂದು ಜನವನ್ನು ಆ ಮನೆಗೆ ಕೊಟ್ಟ ಹಾಗಾಯಿತು.
5) ನಾಕು ದಿನ ನೋಡಿ ಮೆಲ್ಲ ಅಖಾಡಕ್ಕಿಳಿಯಿರಿ.
6) ಉತ್ತರವೇ ಸಿಗದ ಎಷ್ಟು ಯಾಕೆಗಳು ಬೇಕು ಹೇಳಿ ಜಗತ್ತಿನಲ್ಲಿ.
7) ಒಬ್ಬರಾದರೂ ಈಚೆ ಮುಖ ಹಾಕಿದರ ?
8) ಏಳು ವಿಮಲಕ್ಕ ನಾನು ಹೊಯ್ಯುತ್ತೇನೆ.
9) ನೀನು ಒಮ್ಮೆ ಎಬ್ಬಿಸಿನೋಡು.
10) ಒಟ್ಟಾರೆ ಸುಖಪುರುಷಿ.
11) ಕೃಷ್ಣನ ಕೊಳಲಿನಾ ಕರೆ ಕರೆದಂತೆ.

ಬಹು ಆಯ್ಕೆಯ ಪ್ರಶ್ನೆಗಳು : –

1) ಲೇಖಕರಿಗೆ ದೋಸೆ ಬಗ್ಗೆ ನೆನಪು ಬಂದದ್ದು –
ಅ) ಸಿನಿಮಾದಲ್ಲಿ ಆ) ಉದ್ಯಾನವನದಲ್ಲಿ ಇ) ಸೆಮಿನಾರ್‌ನಲ್ಲಿ ಈ) ಕಾಲೇಜಿನಲ್ಲಿ

2) ರಾತ್ರಿ ಮಗುಚಿ ಹಗಲು, ಹಗಲು ಮಗುಚಿ ರಾತ್ರಿ ಎಂದವರು–
ಅ) ಲೇಖಕರು ಆ) ಹರಿಕಥೆ ದಾಸರು ಇ) ಉಪನ್ಯಾಸಕರು ಈ) ವಿದ್ಯಾರ್ಥಿಗಳು

3) ಗಿಡ್ಡದಪ್ಪ ಉಂಡುಂಡೆ ಬೆರಳುಗಳು ನೆನಪಾಗುವುದು ಇದರಿಂದ–
ಅ) ಮಾಚಮ್ಮ ಆ) ವಿಮಲಕ್ಕ ಇ) ಲೇಖಕರು ಈ) ಹರಿಕಥೆ ದಾಸರು

4) ಅತಿ ಉಮೇದನ್ನು ತೋರಿಸಲು ಹೋಗಬಾರದು ಇಲ್ಲಿ–
ಅ) ತವರು ಮನೆಯಲ್ಲಿ ಆ) ಸ್ನೇಹಿತರ ಮನೆಯಲ್ಲಿ
ಇ) ಗಂಡನ ಮನೆಯಲ್ಲಿ ಈ) ತಂಗಿ ಮನೆಯಲ್ಲಿ

5) ದೋಸೆ ಹೋಯ್ದು ಮುಗಿದ ಮೇಲೆ ಸುತ್ತಣ ಗೋಡೆಯ ಮೇಲಲ್ಲಿ ಮೂಡುವುದು –
ಅ) ಬಿರುಕುಗಳು ಆ) ಚಿತ್ರಕಲೆಗಳು ಇ) ನಕ್ಷತ್ರಗಳು ಈ) ಸೂರ್ಯಬಿಂಬಳು

ಒಂದು ವಾಕ್ಯದಲ್ಲಿ ಉತ್ತರಿಸಿ : –

1) ಲೇಖಕಿಯ ತವರಿನಲ್ಲಿ ದೋಸೆ ಮಾಡುತ್ತಿದ್ದವರು ಯಾರು ?
2) ಹೋಟೆಲ್‌ನ ದೋಸೆಯ ಬಗ್ಗೆ ಸ್ತ್ರೀಲೋಕ ಅಸಹ್ಯ ಪಡುವುದೇಕೆ ?
3) ದೋಸೆ ಶಬ್ದ ಕೇಳಿದಾಗ ಲೇಖಕರ ಮನಸ್ಸು ಎಲ್ಲಿಗೆ ಹಾರಿತು ?
4) ವಿಮಲಕ್ಕನಿಗೆ ಗಂಡನ ಮನೆಯಲ್ಲಿನ ಖಾಯಂ ಕೆಲಸ ಯಾವುದು ?
5) ದೋಸೆ ಯಜಮಾಂತಿ ಎಂದು ಯಾರನ್ನು ಕರೆಯುತ್ತಿದ್ದರು ?
6) ನಗೆಯಷ್ಟು ನಿಗೂಢ ಯಾವುದು ಅಲ್ಲ ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : –

1) ಲೇಖಕಿಯು ದೋಸೆ ಬಗ್ಗೆ ಚಿಂತಿಸಲು ಕಾರಣವೇನು ?
2) ಹರಿಕಥೆ ದಾಸರನ್ನು ದೋಶಾದಾಸರೆನ್ನುತ್ತಿದ್ದುದೇಕೆ ?
3) ಪತಿಗೃಹದ ರಾಜಕೀಯ ಎದುರಿಸಲು ವಿಮಲಕ್ಕ ಬೋಧಿಸಿದ ತಂತ್ರ ಯಾವುದು ?
4) ವಿಮಲಕ್ಕನನ್ನು ಝೆನ್ ಗುರುವಿಗೆ ಹೋಲಿಸಲು ಕಾರಣವೇನು ?
5) ನೀರುದೋಸೆ ಮಾಡುವ ವಿಧಾನ ಹೇಗೆ ?
6) ಮುಂಬೈ ಹೋಟೆಲ್‌ನ ದೋಸೆ ಜನಪ್ರಿಯತೆ ಕೇಳಿದ ವಿಮಲಕ್ಕನ ಅನಿಸಿಕೆಗಳಾವುವು ?

ವಿವರವಾಗಿ ಉತ್ತರಿಸಿ : –

1) ಮಾಚಮ್ಮನ ದೋಸೆ ಕೌಶಲ್ಯವನ್ನು ಲೇಖಕಿ ಹೇಗೆ ವಿವರಿಸಿದ್ದಾರೆ ?
2) ಬರಿ ಅಕ್ಕಿ ದೋಸೆ ಹಿಟ್ಟಿನ ಹದದ ಬಗೆಗೆ ಲೇಖಕಿಯ ಅಭಿಪ್ರಾಯಗಳಾವುವು ?
3) ವಿಮಲಕ್ಕನ ದೋಸೆ ಕಾಯಕದ ದಿನಚರಿಯನ್ನು ವಿವರಿಸಿ.
4) ವಿಮಲಕ್ಕನ ದೋಸೆ ಕಾರುಬಾರಿನ ಬಗ್ಗೆ ಮನೆಯವರ ಪ್ರತಿಕ್ರಿಯೆಗಳೇನು ?

ಭಾಷಾಭ್ಯಾಸ : –

1) ಪಠ್ಯದಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಪಟ್ಟಿ ಮಾಡಿರಿ :
ಸೆಮಿನಾರು, ಅಖಾಡ, ಟೆಕ್ನಾಲಜಿ

2) ಇವುಗಳನ್ನು ಬಿಡಿಸಿ ಬರೆಯಿರಿ :
ದೇಶಾಂತರ, ರೂಪಾಂತರ, ಸಮಯಾಸಮಯ, ಜ್ವಾಲೆಯಾಗು, ಮನೆಯೊಳಗೆ

3) ಬಿಡಿಬಿಡಿ, ಅರೆದುಅರೆದು – ಮುಂತಾದ ದ್ವಿರುಕ್ತಿಗಳನ್ನು ಪಟ್ಟಿ ಮಾಡಿ.

4) ಸ್ವಂತ ವಾಕ್ಯದಲ್ಲಿ ಬಳಸಿರಿ:
ಪಂಚಪ್ರಾಣ, ಕಿವಿಮಾತು, ಉರಿದನಿ

## ಪಾಠ–8

## ಕನ್ನಡ ಭಾಷೆ, ಸಾಹಿತ್ಯದ ಅರ್ಥ, ವಿವರಣೆ, ಸ್ವರೂಪ, ವ್ಯಾಪ್ತಿ ಮತ್ತು ಪ್ರಯೋಜನ

ಬಹು ಆಯ್ಕೆಯ ಪ್ರಶ್ನೆಗಳು : –

1) ಭಾಷೆ ಮಾನವನಿಗೆ ಅನಿವಾರ್ಯ
ಅ) ಉಸಿರಿನಷ್ಟೆ ಆ) ಜೀವನದಷ್ಟೆ ಇ) ಬದುಕಿನಷ್ಟೆ ಈ) ಹಣದಷ್ಟೆ

2) ವ್ಯಕ್ತಿ–ವ್ಯಕ್ತಿಗಳಲ್ಲಿ ಸಾಮಾಜಿಕ ಸಹಕಾರವನ್ನುಂಟು ಮಾಡುವುದು –
ಅ) ಭಾಷೆಯ ಲಕ್ಷಣ ಆ) ಸಾಹಿತ್ಯದ ಲಕ್ಷಣ
ಇ) ಬದುಕಿನ ಲಕ್ಷಣ ಈ) ಸಮಾಜದ ಲಕ್ಷಣ

3) ಒಂದು ಅಂದಾಜಿನ ಪ್ರಕಾರ ಭಾರತದಲ್ಲಿನ ಭಾಷೆಗಳ ಸಂಖ್ಯೆ –
ಅ) 4000 ಆ) 3000 ಇ) 5000 ಈ) 6000

4) ಕನ್ನಡಿಗರನ್ನು 'ಕರುನಾಡರ್ ಎಂದು ಸಂಬೋಧಿಸಿದ್ದು –
ಅ) ಕವಿರಾಜ ಮಾರ್ಗ ಆ) ಶಿಲಪ್ಪದಿಗಾರಮ್
ಇ) ಹಲ್ಮಿಡಿ ಶಾಸನ ಈ) ಅಶೋಕನ ಶಾಸನ

5) ಕವಿಗಳಿಗೆ ರಾಜಾಶ್ರಯವಿದ್ದುದು –
ಅ) 8ನೇ ಶತಮಾನ ಆ) 10ನೇ ಶತಮಾನ
ಇ) 12ನೇ ಶತಮಾನ ಈ) 16ನೇ ಶತಮಾನ

6) ವಡ್ಡಾರಾಧನೆಯ ಕರ್ತೃ –
ಅ) ನೃಪತುಂಗ ಆ) ಸಿಂಗಾರಾರ್ಯ ಇ) ಶಿವಕೋಟ್ಯಾಚಾರ್ಯ ಈ) ಪಂಪ

7) ಹಳಗನ್ನಡ, ಹೊಸಗನ್ನಡಗಳ ಸಂಧಿಕಾಲ –
ಅ) 10ನೇ ಶತಮಾನ ಆ) 12ನೇ ಶತಮಾನ
ಇ) 14ನೇ ಶತಮಾನ ಈ) 8ನೇ ಶತಮಾನ

8) ಷಟ್ಪದಿ ಬ್ರಹ್ಮ ಎಂದು ಕರೆಯುವುದು
ಅ) ಪಂಪ ಆ) ಹರಿಹರ ಇ) ರಾಘವಾಂಕ ಈ) ಕುಮಾರವ್ಯಾಸ

9) ಕನಕದಾಸರು ಈ ಪ್ರಕಾರರಕ್ಕೆ ಸೇರಿದವರು –
ಅ) ಜೈನ ಸಾಹಿತ್ಯ ಆ) ವಚನ ಸಾಹಿತ್ಯ ಇ) ಕೀರ್ತನ ಸಾಹಿತ್ಯ ಈ) ಜನಪದ ಸಾಹಿತ್ಯ

10) ನಮ್ಮ ಸ್ವಾತಂತ್ರ್ಯ ಪೂರ್ಣಹರಣವಾದದ್ದು –

ಅ) 18ನೇ ಶತಮಾನದಲ್ಲಿ ಆ) 19ನೇ ಶತಮಾನದಲ್ಲಿ

ಇ) 20ನೇ ಶತಮಾನದಲ್ಲಿ ಈ) 17ನೇ ಶತಮಾನದಲ್ಲಿ

ಒಂದು ವಾಕ್ಯದಲ್ಲಿ ಉತ್ತರಿಸಿ : –

1) ಭಾಷೆಯನ್ನು ಕುರಿತು ಮಹಾಕವಿ ದಂಡಿ ಏನು ಹೇಳುತ್ತಾನೆ ?
2) ಪ್ರಪಂಚದಾದ್ಯಂತ ಸುಮಾರು ಎಷ್ಟು ಭಾಷೆಗಳಿವೆಯೆಂದು ಅಂದಾಜು ಮಾಡಲಾಗಿದೆ ?
3) ಪಂಚದ್ರಾವಿಡ ಭಾಷೆಗಳು ಯಾವುವು ?
4) 'ಕರ್ಣಾಟಾ' ಮತ್ತು ಕರ್ಣಾಟಕಾ' ಎಂಬ ಶಬ್ದಗಳು ಎಲ್ಲಿ ಕಂಡು ಬರುತ್ತವೆ ?
5) ಅಶೋಕನ ಶಾಸನದಲ್ಲಿ ಯಾವ ಪದದ ಬಳಕೆ ಇದೆ ?
6) ಕನ್ನಡದಲ್ಲಿ ಸಿಕ್ಕಿರುವ ಮೊದಲ ಗ್ರಂಥ ಯಾವುದು ?
7) ಸಾಹಿತ್ಯದ ರೂಪ ತಾಳುವುದು ಹೇಗೆ ?
8) ರತ್ನ ತ್ರಯರುಗಳು ಯಾರು ?
9) ಹತ್ತನೇ ಶತಮಾನವನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಏನೆಂದು ಕರೆಯುತ್ತಾರೆ ?
10) ಕೀರ್ತನ ಸಾಹಿತ್ಯಕ್ಕೆ ಯಾವ ಸಿದ್ಧಾಂತ ಪ್ರೇರಣೆಯಾಗಿದೆ ?
11) ಸಾಹಿತ್ಯದ ಸ್ಪರ್ಶವಿಲ್ಲದ ಮನುಷ್ಯ ಯಾರಿಗೆ ಸಮಾನ ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : –

1) ಭಾಷೆಯಲ್ಲಿ ಯಾವುವು ವ್ಯವಸ್ಥಿತ ರೂಪದಲ್ಲಿರುತ್ತವೆ ?
2) ಕನ್ನಡ ಭಾಷೆಯನ್ನು ಭಾಷಾದೃಷ್ಟಿಯಿಂದ ಹೇಗೆ ವಿಭಾಗಿಸಬಹುದು?
3) ಸಾಹಿತ್ಯದ ರೂಪ ತಾಳುವುದು ಹೇಗೆ ?
4) ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು ?
5) ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ.
6) ಸಾಹಿತ್ಯದ ಬಗ್ಗೆ ಕವಿ ರವೀಂದ್ರರ ವಿಚಾರವೇನು ?
7) 'ವಚನ – ಸಾಹಿತ್ಯ'ದ ವಿಶೇಷತೆ ಏನು ?
8) 12ನೇ ಶತಮಾನದಲ್ಲಿ ಮೈದಳೆದ ಸಾಹಿತ್ಯ ರೂಪಗಳು ಯಾವುವು ?
9) ದಾಸ ಸಾಹಿತ್ಯಕ್ಕಿರುವ ಇತರ ಹೆಸರುಗಳಾವುವು ?
10) ಹತ್ತನೇ ಶತಮಾನವನ್ನು 'ಪಂಪಯುಗ'ವೆಂದು ಕರೆಯಲು ಕಾರಣವೇನು ?
11) ಸಾಹಿತ್ಯದ ಪ್ರಯೋಜನವನ್ನು ಕುರಿತು ಡಾ॥ ರಾಧಾಕೃಷ್ಣನ್ ಏನೆಂದು ಹೇಳಿದ್ದಾರೆ ?

ವಿವರವಾಗಿ ಉತ್ತರಿಸಿ : –

1) ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ :
2) ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ವಿಶೇಷವನ್ನು ಬರೆಯಿರಿ.
3) ಸಾಹಿತ್ಯದ ಪ್ರಯೋಜನವನ್ನು ವಿವರಿಸಿ.

ಭಾಷಾಭ್ಯಾಸ : –

1) ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :
ಸಹಕಾರ, ಸ್ವತಂತ್ರ, ಪ್ರಾಚೀನ, ಹಳಗನ್ನಡ, ಅಮೂರ್ತತೆ, ಅಂತರಂಗ, ಅನುಭವ, ಗುಣ, ಶುಭ, ಜ್ಞಾನ, ಪ್ರಬಲ, ಧರ್ಮ ವ್ಯವಸ್ಥೆ

2) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.
ಅಧ್ಯಯನ, ಶೈಲಿ, ಪ್ರಾಚೀನ, ಸುಭಾಷಿತ, ಹೋರಾಟ